# I. ಸಜಾತಿ ಒತ್ತಕ್ಷರದ ಕಥೆಗಳು

## 1. ಹಕ್ಕಿ ಗೂಡು



ರಾಜಣ್ಣ ತಂಗಿಯೊಡನೆ ಹಗ್ಗದ ಆಟ ಆಡುತ್ತಿದ್ದ. ಹಗ್ಗ ಹಳ್ಳಕ್ಕೆ ಬಿದ್ದು ಹೋಯಿತು. ಆಟ ನಿಂತಿತು. ಇಬ್ಬರೂ ಪಕ್ಕದ ಗಿಡದ ಬಳಿ ಒಂದು ಕರ‍್ರನೆ ಹಕ್ಕಿ ನೋಡಿದರು. ಸದ್ದು ಮಾಡದೆ ನಿಂತು ಅದು ಗೂಡು ಕಟ್ಟುವುದನ್ನು ನೋಡಿದರು. ಚಿಕ್ಕ-ಪುಟ್ಟ ಕಡ್ಡಿ ತಂದು ಜೋಡಿಸಿತ್ತು. ಮೆತ್ತಗಿರುವ ಎಲೆ ತಂದು ಗೂಡಿಗೆ ಹಾಸುತ್ತಿತ್ತು. ಆ ವೇಳೆಗೆ ಗೆಳೆಯ ಬಸವಯ್ಯ ಬಂದನು. ಮೂವರೂ ಕಣ್ಣು ಮುಚ್ಚಾಲೆ ಆಟ ಆಡಿದರು. ಕುಣಿದು ಕುಪ್ಪಳಿಸಿದರು. ಆಗ ಪೇಟೆಯಿಂದ ಬಸ್ಸಿನಲ್ಲಿ ಅಜ್ಜ, ಅವ್ವ, ಅಮ್ಮ ಬಂದರು. ಓಹ್ಹೋಹ್ಹೋ. . . .! ಎಂದು ಆಟ ನಿಲ್ಲಿಸಿ ಮನೆಗೆ ನಡೆದರು.

# 2. ಮಲ್ಲಿಗೆ ಹೂ



ಶಾಲೆಯ ಪಕ್ಕ ಜಾಗ ಖಾಲಿ ಇತ್ತು. ಲಚ್ಚಿ ಅಲ್ಲಿ ಮಲ್ಲಿಗೆ ಬಳ್ಳಿ ನೆಟ್ಟಳು. ಲಚ್ಚಿಯ ತಮ್ಮ ಸುಬ್ಬ ಬಳ್ಳಿಗೆ ದಿನವೂ ನೀರು ಹಾಕುತ್ತಿದ್ದ. ಬಳ್ಳಿ ಬೆಳೆಯಿತು. ಮೊಗ್ಗು ಮೂಡಿತು. ಮೊಗ್ಗು ಅರಳಿ ಹೂವಾಯಿತು. ಹಸಿರು ಬಳ್ಳಿಯ ತುಂಬ ಮಲ್ಲಿಗೆ ಹೂವೋ ಹೂವು! ಲಚ್ಚಿ ಮನಸ್ಸಿನಲ್ಲೇ ಹಿಗ್ಗಿದಳು. ಶಾಲೆಯ ದೊಡ್ಡ ಗುರುಗಳೂ ಮೆಚ್ಚಿದರು. ಬಳ್ಳಿಯಿಂದ ಯಾರೂ ಹೂ ಕುಯ್ಯಬಾರದೆಂದು ಅಪ್ಪಣೆ ಮಾಡಿದರು. ಲಚ್ಚಿಗೆ ಆಸೆ ತಡೆಯಲು ಆಗಲಿಲ್ಲ. ಸಂಜೆ ಒಬ್ಬಳೇ ಬಂದು ಹೂ ಕಿತ್ತೇ ಬಿಟ್ಟಳು. ಸರ್ರನೆ ಮಲ್ಲಿಗೆ ಹಾರ ಕಟ್ಟಿದಳು. ತನ್ನ ಅವ್ವನಿಗೆ ಕೊಟ್ಟಳು. ಸುಬ್ಬ ಬಂದು ಅವ್ವನಿಗೆ ಗುರುಗಳ ಅಪ್ಪಣೆಯ ವಿವರ ಹೇಳಿದ. ಆಗ ಅವ್ವ ಲಚ್ಚಿಗೆ 'ನೀನು ಮಾಡಿದ್ದು ಸರಿಯೇ ? ಕದ್ದ ಹೂವಿನ ಹಾರ ನನಗೆ ಬೇಡ ಎಂದುಬಿಟ್ಟಳು. ಲಚ್ಚಿ ಉಹ್ಹುಹ್ಹೂ. . . .ಎಂದು ಸಣ್ಣ ದನಿಯಲ್ಲಿ ಅಳತೊಡಗಿದಳು.

ಅಜ್ಜ ಬಂದು 'ಲಚ್ಚಿ, ಲಜ್ಜೆ ಬಿಟ್ಟು ಗುರುಗಳ ಬಳಿ ನಿನ್ನ ತಪ್ಪು ಒಪ್ಪಿಕೊ; ಈ ಮಲ್ಲಿಗೆ ಹಾರ ಗುರುಗಳಿಗೇ ಕೊಡು ಎಂದು ಸಮಾಧಾನ ಮಾಡಿದರು.

1. ಒತ್ತಕ್ಷರ ರಟ್ಟಿನಲ್ಲಿ ಮೂರು ವಿಧದ ಸಜಾತಿ ಒತ್ತಕ್ಷರಗಳನ್ನು, ಅವುಗಳ ಉಚ್ಚಾರಣೆಯನ್ನೂ ಪರಿಚಯಿಸಿ
2. ಯಾವುದೇ ಪದದಲ್ಲಿ ಮೊದಲನೆಯ ಅಕ್ಷರ ಒತ್ತಕ್ಷರವಾಗಿರುವುದಿಲ್ಲ. ಆದ್ದರಿಂದ ಉದಾಹರಣೆಗೆ ಒಂದು ಪದ ಹೇಳಿ ವಿವರಿಸಿ:

ಅ ಜ್ಜ → ಅ ಜ್ ಜ

# 3. ಆನೆಯ ದಂತ

ಒಂದು ಊರಿನಲ್ಲಿ ಒಂದು  ಇತ್ತು.
ಈ  ಗೆ ಒಂದು ಗುಬ್ಬಚ್ಚಿ, ಒಂದು ಎಮ್ಮೆ, ಒಬ್ಬ ಹುಡುಗ ತಿಮ್ಮ, ಹೀಗೆ ಮೂವರು ಗೆಳೆಯರಿದ್ದರು.
ಆ  ಯನ್ನು ಕಂಡರೆ ಈ ಮೂವರು ಗೆಳೆಯರಿಗೂ ಒಲವು. ಅಬ್ಬಬ್ಬಾ !  ಯ ಎತ್ತರ, ಅದರ ದೊಡ್ಡ ದೇಹ, ಅಗಲವಾದ ಕಿವಿ, ಸಣ್ಣ ಕಣ್ಣು, ತೂಗಾಡುವ ಸೊಂಡಿಲು, ಬೆಳ್ಳಗೆ ಹೊಳೆಯುವ ದಂತ, ಎಲ್ಲವೂ ಅವರಿಗೆ ಅಚ್ಚು ಮೆಚ್ಚು.

ಒಂದು ದಿನ ಆ ಊರಿಗೆ ಕತ್ತಲಲ್ಲಿ ಇಬ್ಬರು ಕಳ್ಳರು ಬಂದರು.  ಯನ್ನು ಮರಕ್ಕೆ ಹಗ್ಗದಿಂದ ಕಟ್ಟಿ ಹಾಕಿದರು.  ಯ ದಂತವನ್ನು ಕುಯ್ಯಲು ಹವಣಿಸಿದರು. ಅದೇ ಮರದ ಮೇಲೆ  ಯ ಗೆಳೆಯ ಗುಬ್ಬಚ್ಚಿ ಕುಳಿತಿತ್ತು.  ಗೆ ಆದ ಪಾಡು ನೋಡಿ ಪುರ್ರನೆ ಹಾರಿ ಬಂದು ಎಮ್ಮೆಗೆ ಹೇಳಿತು. ಕೂಡಲೇ ಎಮ್ಮೆ ತಿಮ್ಮನಿಗೆ ತಿಳಿಸಿತು.

ಆಗ  ಗಾಗಿ ತಿಮ್ಮ ಓಡೋಡಿ ಬಂದ. ಅವನ ಅಜ್ಜ, ಅಪ್ಪ, ಅವ್ವ ಎಲ್ಲರೂ ಹಿಂದೆಯೇ ಓಡಿ ಬಂದರು. 'ಅಯ್ಯಯ್ಯೋ , ಊರ ಜನರೇ ಎದ್ದೇಳಿ,  ಯ ದಂತ ಉಳಿಸಿ, ಎಂದು ಬೊಬ್ಬೆ ಹಾಕಿದರು. ಜನರೆಲ್ಲ ಬಂದರು, ಕಳ್ಳರನ್ನು ಹಿಡಿದರು.  ಯನ್ನು ಬಿಡಿಸಿದರು,
 ಯ ದಂತವನ್ನು ಉಳಿಸಿದರು.



ಗೆಳೆಯರ ಸಹಾಯಕ್ಕೆ  ಯು ಸೊಂಡಿಲೆತ್ತಿ ಸಲಾಮು ಮಾಡಿತು. ಎಲ್ಲರೂ ಸಂತೋಷದಿಂದ ಹಹ್ಹಹ್ಹಾ ... ಎಂದು ಚಪ್ಪಾಳೆ ತಟ್ಟಿ ಕುಣಿದರು.

* * *

1. ಆನೆಯ ಚಿತ್ರವನ್ನು ಪ್ರತಿಬಾರಿ ಆನೆ ಎಂದು ಓದಿಸಿ. ಪ್ರತ್ಯಯಗಳನ್ನು ಪರಿಚಯಿಸಿ
   ಆನೆ   ಆನೆ ಯ   ಆನೆ ಗೆ   ಆನೆ ಗಾಗಿ   ಆನೆ ಯನ್ನು   ಆನೆ ಯು
2. ಕಥೆಯಲ್ಲಿ ಚಿಹ್ನೆಗಳನ್ನು ಅರ್ಥಪೂರ್ಣವಾಗಿ ಓದಿ ತೋರಿಸಿ.
   ಪೂರ್ಣವಿರಾಮ .   ಆಶ್ಚರ್ಯ !   ಅರ್ಧವಿರಾಮ ,   ಪ್ರಶ್ನೆ ?
3. ಈ ಕಥೆಯಲ್ಲಿ ಬರುವ ಹತ್ತೊಂಬತ್ತು ಸಜಾತಿ ಒತ್ತಕ್ಷರ ಪದಗಳನ್ನು ಓದಿಸಿ.

# 4. ಮಾತು ಬಲ್ಲ ಬಾಯಿ






ಕಾಣಲು ಬೇಕು ಕಣ್ಣು
ಕೇಳಲು ಬೇಕು ಕಿವಿ
ಮೂಸಲು ಬೇಕು ಮೂಗು
ಮಾತಿಗೆ ಬೇಕು ಬಾಯಿ





ಬೀಸಲು ಬೇಕು ತೋಳು
ಹಿಡಿಯಲು ಬೇಕು ಕೈ
ಬರೆಯಲು ಬೇಕು ಬೆರಳು
ನಡೆಯಲು ಬೇಕು ಕಾಲು



ನನಗೆ ಇದೆ ಎರಡು ಕಾಲು
ಕಾಗೆಗೂ ಇದೆ ಎರಡು ಕಾಲು
ನಾಯಿಗೆ ಇದೆ ನಾಲ್ಕು ಕಾಲು
ಇರುವೆಗೆ ಇದೆ ಆರು ಕಾಲು




1. ಈ ಕಥೆಯನ್ನು ಪದ್ಯರೂಪದಲ್ಲಿ ರಾಗವಾಗಿ ಓದಿಸಿ ಅರ್ಥ ವಿವರಿಸಿ.

ಏಡಿಗೆ ಇದೆ ಎಂಟು ಕಾಲು
ಹುಳಕೆ ಇವೆ ಬಹಳ ಕಾಲು
.... ಬಹಳ ಬಹಳ ಕಾಲು





ನನಗೆ ಸಾಕು ಎರಡು ಕಾಲು
ಬೇಗ ಬೇಗ ಓಡುವೆ,
ಜಿಗಿದು ಕುಣಿದು ಹಾರಬಲ್ಲೆ
ಸಾಲದೇನು ಕೇಳು, ಮುಂದೆ





ಬಾಯಿ ಇಹುದು ಅವಕೂ ನನಗೂ !
ಮಾತು ಬಲ್ಲ ಬಾಯಿ ನನಗೆ
ಕೂಗ ಬಲ್ಲ ಬಾಯಿ ಅವಕೆ
ಮಾತು ಬಲ್ಲ ಜಾಣ ನಾನು
ಓದ ಬಲ್ಲ ಜಾಣ ನಾನು
ಇನ್ನೇನು ಬೇಕು ಹೇಳು ನೀನು.

*(ಆಧಾರ - ಶಿವರಾಮ ಕಾರಂತ)*

# II. ವಿಜಾತಿ ಒತ್ತಕ್ಷರದ ಕಥೆಗಳು

## 5. ಶಾಲೆಯಲ್ಲಿ ಊಟ



ಅಕ್ಬರ್, ವಿಕ್ಟರ್, ವತ್ಸಲ ಸಹಪಾಠಿಗಳು. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾರೆ. ಅವರ ಶಾಲೆಯಲ್ಲಿ ಈಗ ಮಕ್ಕಳಿಗೆ ಬಿಸಿ ಊಟ ಪ್ರಾರಂಭವಾಗಿದೆ. ಯಾರೂ ಮನೆಯಿಂದ ಊಟ ತರಬೇಕಾಗಿಲ್ಲ. ಎಲ್ಲ ಸಹಪಾಠಿಗಳೂ ಒಟ್ಟಾಗಿ ಕುಳಿತು ಊಟ ಮಾಡುವುದು ಎಷ್ಟು ಚೆನ್ನ! ಎಲ್ಲರಿಗೂ ಬಹಳ ಖುಷಿ !

ಈಗ ಅಕ್ಬರ್, ವಿಕ್ಟರ್, ವತ್ಸಲಾಗೆ ಶಾಲೆಯಲ್ಲಿ ಮೊದಲಿಗಿಂತ ಸ್ನೇಹಿತರು ಹೆಚ್ಚಾಗಿದ್ದಾರೆ.

# 6. ಸುಂದರಿ ಸೌಮ್ಯ



ಒಂದೂರಿನಲ್ಲಿ ಒಬ್ಬ ರಾಜ. ಅವನಿಗೆ ಮೂವರು ಹೆಣ್ಣು ಮಕ್ಕಳಿದ್ದರು. ಅವರ ಹೆಸರು ಭವ್ಯ, ರಮ್ಯ ಮತ್ತು ಸೌಮ್ಯ. ಭವ್ಯ, ರಮ್ಯ ಇಬ್ಬರೂ ಸುಂದರಿಯರು-ಅಪ್ಸರೆಯಂತಿದ್ದರು. ಆದರೆ ಕಿರಿಯ ಮಗಳು ಸೌಮ್ಯ ಅಷ್ಟೇನೂ ರೂಪವಂತೆಯಾಗಿರಲಿಲ್ಲ. ಆದರೆ ಗುಣವಂತೆ. ಭವ್ಯ, ರಮ್ಯ ತಮ್ಮ ರೂಪಿಗೆ ಜಂಭ ಪಡುತ್ತಿದ್ದರು; ತಂಗಿ ಸೌಮ್ಯಳನ್ನು ರೂಪಸಿ ಅಲ್ಲವೆಂದು ಆಗಾಗ ಹಾಸ್ಯ ಮಾಡುತ್ತಿದ್ದರು. ಆದರೆ ರಾಜ ತನ್ನ ಕಿರಿಯ ಮಗಳನ್ನೇ ಅತ್ಯಂತ ಪ್ರೀತಿಸುತ್ತಿದ್ದ.

ಒಂದು ಸಲ ಭವ್ಯ, ರಮ್ಯ, ಸೌಮ್ಯ ಮೂವರೂ ತೋಟದ ಕೊಳದ ಬಳಿ ಆಡುತ್ತಿದ್ದರು. ಕೊಳದ ನೀರಿನಲ್ಲಿ ಅವರ ಮುಖದ ಪ್ರತಿಬಿಂಬ ಕಾಣಿಸಿತು. ಇಬ್ಬರು ಅಕ್ಕಂದಿರು ತಂಗಿ ಸೌಮ್ಯಳಿಗೆ - 'ನೀನು ನೋಡಲು ಸ್ವಲ್ಪವೂ ಚೆನ್ನಾಗಿಲ್ಲ!' ಎಂದು ನಗ ತೊಡಗಿದರು. ಸೌಮ್ಯಳಿಗೆ ಬಹಳ ದುಃಖವಾಯಿತು. ಅಲ್ಲೇ ಅಳುತ್ತ ನಿಂತಳು.



ಅಕ್ಕಂದಿರು ಅರಮನೆಗೆ ಹಿಂತಿರುಗಿದರು. ಆಗ ಮರದಿಂದ ಒಂದು ಗಿಳಿ ದೊಪ್ಪೆಂದು ಸೌಮ್ಯಳ ಬಳಿ ಬಿತ್ತು. ಸೌಮ್ಯಳಿಗೆ ಕರುಣೆ ಉಕ್ಕಿ ಬಂತು. ಕೊಳದ ನೀರು ತಂದು ತೊಟ್ಟು ತೊಟ್ಟಾಗಿ ಗಿಳಿಯ ಬಾಯಿಗೆ ಹನಿಸಿದಳು.

ಗಿಳಿ ಚೇತರಿಸಿಕೊಂಡಿತು. ‘ನೀನೇಕೆ ಅಳುತ್ತಿದ್ದೆ ರಾಜಕುಮಾರಿ ? ಎಂದು ಕೇಳಿತು. ಸೌಮ್ಯ ತಾನೂ ಸುಂದರಿಯಾಗಬೇಕು ಎಂಬ ತನ್ನ ಆಸೆ ಹೇಳಿದಳು. ಆಗ ಆ ಗಿಳಿ ಸೌಮ್ಯಳಿಗೆ ಒಂದು ಹಣ್ಣು ನೀಡಿತು. ‘ನೀನು ಈ ಹಣ್ಣು ತಿಂದರೆ ಸುಂದರಿಯಾಗುವೆ, ಆದರೆ ನಾನು ನಿನಗೆ ಇದನ್ನು ಕೊಟ್ಟ ವಿಷಯ ಗುಟ್ಟಾಗಿರಬೇಕು,ಯಾರಿಗೂ ಹೇಳಬಾರದು ಎಂದು ಹೇಳಿ ಮೆಲ್ಲಗೆ ಹಾರಿ ಹೋಯಿತು.



ಸೌಮ್ಯ ಕೂಡಲೇ ಗಿಳಿ ಕೊಟ್ಟ ಹಣ್ಣು ತಿಂದಳು. ಏನಾಶ್ಚರ್ಯ ! ಸೌಮ್ಯ ಸುಂದರಿಯಾಗಿ ಬದಲಾದಳು. ಬೇಗನೆ ಅರಮನೆಗೆ ಬಂದಳು. ರಾಜನ ಬಳಿ ಹೋದಳು. ಆದರೆ ರಾಜ ಬದಲಾದ ಸೌಮ್ಯಳನ್ನು ಗುರುತಿಸಲೇ ಇಲ್ಲ.

‘ಅಪ್ಪಾ, ನಾನು ನಿನ್ನ ಕಿರಿಯ ಮಗಳು ಸೌಮ್ಯ ಎಂದಳು. ರಾಜ ಅವಳ ಮಾತನ್ನು ನಂಬಲಿಲ್ಲ. ಆಗ ಸೌಮ್ಯ ಗಿಳಿ ಕೊಟ್ಟ ಹಣ್ಣು ತಿಂದು ತಾನು ಸುಂದರಿಯಾಗಿ ಬದಲಾದ ವಿಷಯ ಹೇಳಿದಳು. ಈ ವಿಷಯ ಹೇಳಿದ ಕೂಡಲೇ ಸೌಮ್ಯ ಮತ್ತೆ ಹಿಂದಿನಂತೆ ಬದಲಾಗಿ ಬಿಟ್ಟಳು. ಹಕ್ಕಿಯ ಗುಟ್ಟು ರಟ್ಟಾಯಿತು; ಅವಳ ಸುಂದರ ರೂಪ ಮಾಯ ವಾಯಿತು. ಸೌಮ್ಯ ಜೋರಾಗಿ ಅಳಲು ಪ್ರಾರಂಭಿಸಿದಳು. ಆಗ ರಾಜ ಪ್ರೀತಿಯಿಂದ ಅವಳನ್ನು ಹತ್ತಿರ ಕರೆದ. ‘ಮಗೂ, ನೀನು ಹೇಗಿದ್ದರೂ ನನಗೆ ಸುಂದರಿ. ನೀನು ಗುಣವಂತೆ. ನೀನು ನನ್ನ ಮುದ್ದು ಮಗಳಲ್ಲವೇ, ಅಳಬೇಡ ಎಂದು ಸಮಾಧಾನ ಮಾಡಿದ.

# 7. ಒಂದು ಭಾನುವಾರದ ಸಂಜೆ




ಒಂದು ಭಾನುವಾರದ ಸಂಜೆ ನಾನು, ರತ್ನ ಮತ್ತು ಕೃಷ್ಣ ಮೂವರೂ ಚಿತ್ರ ನೋಡಲು ಹೊರಟೆವು. ‘ಭಕ್ತ ಪ್ರಹ್ಲಾದ  ಚಿತ್ರ ನಡೆಯುತ್ತಿದ್ದ ಸ್ಟರ್ಲಿಂಗ್ ಥಿಯೇಟರ್ ತಲಪಿದೆವು. ಆಗಲೇ ಅಲ್ಲಿ ‘ಚಿತ್ರ ಮಂದಿರ ತುಂಬಿದೆ  ಎಂದು ಫಲಕ ಹಾಕಿತ್ತು. ನಮಗೆ ಬಹಳ ನಿರಾಶೆಯಾಯಿತು.

‘ಈಗ ನಾವು ವಸ್ತು ಪ್ರದರ್ಶನಕ್ಕೆ ಹೋಗೋಣವೆ ?  - ಎಂದು ಕೃಷ್ಣ ಕೇಳಿದ. ‘ಹೌದು, ಶಾಲೆಯಲ್ಲಿ ಗುರುಗಳೂ ಹೇಳಿದರು, ಅಲ್ಲಿ ನೋಡಲು ಬೇಕಾದಷ್ಟು ವಿಷಯಗಳಿವೆಯಂತೆ.  - ರತ್ನ ಹೇಳಿದಳು.

ಮೂವರೂ ಅದೇ ಸರಿ ಎಂದು ನಿಶ್ಚಯಿಸಿದೆವು. ಬೇಗನೆ ಒಂದು ಆಟೋರಿಕ್ಷಾ ಹತ್ತಿ ಹೊರಟೆವು. ವಸ್ತು ಪ್ರದರ್ಶನಕ್ಕೂ ಬಹಳ ಜನ ಸೇರಿದ್ದರು. ಸರತಿಯಲ್ಲಿ ನಿಂತು ಪ್ರತಿ ಒಬ್ಬರಿಗೂ ನಾಲ್ಕು ರೂಪಾಯಿಯ ಟಿಕೆಟ್‌ಪಡೆದೆವು.

ಆಹಾ, ಪ್ರವೇಶದ್ವಾರ ಎಷ್ಟು ಚಂದ ! ಖಡ್ಗ ಹಿಡಿದು ನಿಂತ ಚಾಮುಂಡೇಶ್ವರಿ ಪ್ರತಿಮೆ, ಸುತ್ತಲೂ ಝಗಝಗಿಸುವ ಬಲ್ಬುಗಳು ! ನೀರಿನ ಕಾರಂಜಿ ! ಬಣ್ಣದ ಬೆಲೂನ್ ಹಿಡಿದ ಮಕ್ಕಳು. ನಾವೂ ಉತ್ಸಾಹದಿಂದ ಒಳಗೆ ನಡೆದೆವು.

ಮೊದಲು ಸಾಲು ಸಾಲಿನ ಅಂಗಡಿಗಳನ್ನೆಲ್ಲ ದಾಟಿದೆವು. ಚಿತ್ರಕಲೆ ವಿಭಾಗ ನೋಡಿದೆವು. ಕುಂಚದ ಕುಸುರಿ ಕೆಲಸ ನೋಡಿ ಚಕಿತರಾದೆವು. ನಂತರ ಖಾದಿ ಗ್ರಾಮೋದ್ಯೋಗ ವಿಭಾಗದಲ್ಲಿ ಕರಕುಶಲ ವಸ್ತು, ರೇಷ್ಮೆ ಬಟ್ಟೆಯನೇಯ್ಗೆಯ ವಿಧಾನವನ್ನು ನೋಡಿದೆವು. ಅಲ್ಲಿಂದ ಇನ್ನೂ ಮುಂದೆ ಸಾಗಿದೆವು. ಅಲ್ಲಿ ವಿಜ್ಞಾನ, ವಿದ್ಯುಚ್ಛಕ್ತಿ ಬಳಕೆ, ಅರಣ್ಯ ಸಂರಕ್ಷಣೆ ವಿಭಾಗಗಳು ಒಂದೊಂದೂ ಆಕರ್ಷಕವಾಗಿದ್ದವು. ವಿವಿಧ ಛಾಯಾಚಿತ್ರಗಳನ್ನು ನೋಡಿದೆವು. ನಕ್ಷೆಗಳಲ್ಲಿ ಸ್ಪಷ್ಟವಾಗಿ ಬರೆದ ವಿವರಗಳನ್ನು ಓದಿಕೊಂಡೆವು, ಸಮಯ ಕಳೆದದ್ದೇ ತಿಳಿಯಲಿಲ್ಲ.






ಮುಂದೆ ಮನರಂಜನಾ ಕ್ರೀಡೆಗಳು ಸಾಕಷ್ಟಿದ್ದವು. ಪಕ್ಕದಲ್ಲೇ ರಂಗ ಮಂದಿರದಲ್ಲಿ ಸಮೂಹನೃತ್ಯ ನಡೆಯುತ್ತಿತ್ತು. ಜನರ ಗದ್ದಲವೋ ಗದ್ದಲ; ಧ್ವನಿವರ್ಧಕದ ಶಬ್ದ ಬೇರೆ! ನಾವು ಜೇಯಿಂಟ್ ವ್ಹೀಲ್‌ನಲ್ಲಿ ಕುಳಿತೆವು. ಅದು ಚಕ್ರಾಕಾರದಲ್ಲಿ ತಿರುಗುತ್ತಾ ಮೇಲೆ ಹೋದಾಗ ಮೈ ಝುಂ ಎಂದಿತು. ನಂತರ ಖಾರದ ಬಜ್ಜಿ, ಕಡ್ಲೆ ಬೀಜ, ಆಲೂಚಿಪ್ಸ್ ತಿಂದೆವು. ತಣ್ಣಗೆ ಕಡ್ಡಿ ಐಸ್ ಕ್ರೀಂ ಸಹ ತಿಂದೆವು. ಮಜವಾಗಿತ್ತು. ಬಸ್ಸಿನಲ್ಲಿ ಮನೆಗೆ ವಾಪಸ್ಸಾದೆವು. ಅಂತೂ ಚಿತ್ರ ನೋಡಿದಿದ್ದರೂ ವಸ್ತು ಪ್ರದರ್ಶನ ನೋಡಿದ್ದು ನಮಗೆ ಬಹಳ ಸಂತೋಷವಾಗಿತ್ತು. ರಾತ್ರಿ ಊಟ ಮುಗಿಸಿ ಹಾಯಾಗಿ ಮಲಗಿದ್ದೆವು. ನನಗಂತೂ ಮತ್ತೆ ಜೇಯಿಂಟ್ ವ್ಹೀಲ್‌ನಲ್ಲಿ ಕುಳಿತ ಹಾಗೆ ರಾತ್ರಿ ಎಲ್ಲ ಕನಸು ! ಬೆಳಿಗ್ಗೆ ಬೇಗನೆ ಎದ್ದು ಶಾಲೆ ಹೊರಡಲು ಅಣಿಯಾದೆ.

# III. ಸ್ವಯಂ ವಾಚನ–ಅರ್ಥೈಸುವಿಕೆಗಾಗಿ ವಿಶೇಷ ಕಥೆಗಳು

*ಮಕ್ಕಳೇ, ನೀವೀಗ ಕನ್ನಡ ಭಾಷೆಯ ಯಾವುದೇ ಕಥೆಯನ್ನು ಸುಲಲಿತವಾಗಿ ಅಂದರೆ ನಿರರ್ಗಳವಾಗಿ, ಅದರ ಅರ್ಥವನ್ನು ತಿಳಿಯುತ್ತಾ, ಇತರರ ಸಹಾಯವಿಲ್ಲದೆ ಓದಬಲ್ಲಿರಿ. ಈ ವಿಶೇಷ ಕಥೆಗಳನ್ನು ಓದಿ ಆನಂದಿಸಿ.*



# 8. ಬೆಕ್ಕಿನ ಮರಿ

ಆ ದಿನ ಆಶಾ ಮನೆಯ ಹೊರಗೆ ಆಟವಾಡುತ್ತಿದ್ದಳು. ಆಗ ಅವಳಿಗೆ ಕುಯ್ಯ್ಞ್ .... ಕುಯ್ಯ್ಞ್ .... ಎಂದು ಶಬ್ದ ಕೇಳಿಸಿತು. ಅವಳು ಅಕ್ಕ ಪಕ್ಕ ನೋಡಿದಳು. ರಸ್ತೆಯ ಬದಿಯಲ್ಲಿ ಒಂದು ಬೆಕ್ಕಿನ ಮರಿ ನರಳುತ್ತಾ ಮಲಗಿತ್ತು. ಆಶಾ ಅದರ ಬಳಿಗೆ ಹೋಗಿ ನೋಡಿದಳು. ಅದರ ಕಾಲಿಗೆ ಪೆಟ್ಟಾಗಿತ್ತು. ಆಶಾಗೆ ಕರುಣೆ ಉಕ್ಕಿ ಬಂತು. ‘ಅಯ್ಯೋ ಪಾಪ ಎಂದುಕೊಂಡು ತನ್ನ ಅಮ್ಮನನ್ನು ಕರೆದಳು. ಅಮ್ಮ ಹೊರಗೆ ಬಂದು ಬೆಕ್ಕಿನ ಮರಿ ನೋಡಿದರು. ಮೆಲ್ಲಗೆ ಅದನ್ನು ಎತ್ತಿಕೊಂಡು ಮನೆಯ ಒಳಗೆ ಹೋದಳು.

ಅಮ್ಮ ಬೆಕ್ಕಿನ ಮರಿಯ ಕಾಲಿನ ಗಾಯಕ್ಕೆ ಔಷಧಿ ಹಚ್ಚಿ ಪಟ್ಟಿ ಕಟ್ಟಿದಳು. ಆಶಾ ಒಂದು ಬಟ್ಟಲಿನಲ್ಲಿ ಹಾಲು ತಂದಳು. ಇಬ್ಬರೂ ಸೇರಿ ಮರಿಗೆ ಹಾಲು ಕುಡಿಸಿದರು. ಅದು ಅಮ್ಮನ ಮಡಿಲಲ್ಲಿ ಹಾಯಾಗಿ ಮಲಗಿತು.

ಅಂದಿನಿಂದ ಬೆಕ್ಕಿನ ಮರಿ ಆಶಾಳ ಜೊತೆಗೆ ವಾಸವಾಗಿದೆ. ಅದರ ಕಾಲಿನ ಗಾಯ ಈಗ ವಾಸಿಯಾಗಿದೆ. ಅವಳು ಅದನ್ನು ಪ್ರೀತಿಯಿಂದ ‘ಮಿಂಟೂ ಎಂದು ಕರೆಯುವಳು. ಅದೂ ಅವಳು ಎಲ್ಲಿ ಹೋದರೂ ಹಿಂದೆಯೇ ‘ಮಿಯ್ಯಾಂ ... ಎನ್ನುತ್ತಾ ಓಡಿ ಬರುವುದು.

ಮಿಂಟೂಗೆ ಆಶಾಳನ್ನು ಕಂಡರೆ ಎಷ್ಟು ಪ್ರೀತಿ !

ಸರಿ ಉತ್ತರಕ್ಕೆ ( ✓ ) ಹಾಕು :

1. ಆಶಾಗೆ ಬೆಕ್ಕಿನ ಮರಿ ಎಲ್ಲಿ ಸಿಕ್ಕಿತು - ತೋಟ / ರಸ್ತೆ ಬದಿ / ಅಂಗಳದಲ್ಲಿ
2. ಬೆಕ್ಕಿನ ಮರಿಗೆ ಎಲ್ಲಿ ಪೆಟ್ಟಾಗಿತ್ತು - ಕಾಲು / ಮೂತಿ / ತಲೆ
3. ಆಶಾ ಬೆಕ್ಕಿನ ಮರಿಗೆ ಏನೆಂದು ಕರೆಯುವಳು - ಪಿಂಟೂ / ಮೀನೂ / ಮಿಂಟೂ

# 9. ಯಾವ ಸದ್ದು ?

ಮಧ್ಯ ರಾತ್ರಿ ಆಗಿತ್ತು. ರೀನಾ ಮನೆಯಲ್ಲಿ ಮಲಗಿದ್ದಳು. ಅವಳಿಗೆ ಯಾಕೋ ನಿದ್ರೆ ಬರುತ್ತಿರಲಿಲ್ಲ. ಆಗ ಒಂದು ವಿಚಿತ್ರ ಸದ್ದು ಕೇಳಿಸಿತು. ಆ ಸದ್ದಿಗೆ ಅವಳಿಗೆ ಭಯವಾಯಿತು. ಇದು ಯಾವ ಸದ್ದು? ಎಂದು ಎದ್ದಳು.

ಮೂಲೆಯಲ್ಲಿ ಇಟ್ಟಿದ್ದ ಒಂದು ದೊಣ್ಣೆಯನ್ನು ಕೈಗೆ ಎತ್ತಿಕೊಂಡಳು. ನಿಧಾನವಾಗಿ ಬಂದಳು. ಸದ್ದು ಅಪ್ಪನ ಮಂಚದ ಕಡೆಯಿಂದ ಬರುತ್ತಿತ್ತು. ಮಲಗಿದ್ದ ಅಪ್ಪನ ಮಂಚದ ಕೆಳಗೆ ಯಾರೋ ಅಡಗಿರಬಹುದು ಎಂದು ಭಾವಿಸಿದಳು. ಮಂಚದ ಹತ್ತಿರ ಬಂದು ನಿಂತು ನೋಡಿದಳು. *'ಅರೆ! ಅದು ಅಪ್ಪನ ಗೊರಕೆಯ ಸದ್ದು ! ಗೊರ್ .... ಗೊರ್......'*

ಗೊರಕೆಯ ಶಬ್ದಕ್ಕೆ ನಾನು ಇಷ್ಟು ಹೆದರಿದೆನಲ್ಲಾ ಎಂದು ಜೋರಾಗಿ ನಗತೊಡಗಿದಳು. ಕೈಯಲ್ಲಿದ್ದ ದೊಣ್ಣೆ ಜಾರಿ ನೆಲಕ್ಕೆ ಉರುಳಿತು. ಆ ಶಬ್ದಕ್ಕೆ ಅಪ್ಪನಿಗೆ ಎಚ್ಚರವಾಯಿತು. ಗೊರಕೆ ಸದ್ದು ನಿಂತಿತು. ಅವರು ಥಟ್ಟನೆ ಎಂದು ಕುಳಿತು *"ಯಾರು? ಇಲ್ಲಿ ಯಾರು ಬಂದಿದ್ದಾರೆ!"* ಎಂದು ಗಾಬರಿಯಿಂದ ಕೂಗಿದರು. ರೀನಾ ಅವರಿಗೆ ಸಮಾಧಾನ ಮಾಡಿ ತಾನು ಮಲಗಲು ಹೋದಳು.

1. ರೀನಾಗೆ ಮಧ್ಯರಾತ್ರಿ ಏಕೆ ಭಯವಾಯಿತು?

   ..............................................................................................................

2. ಯಾವ ಸದ್ದಿಗೆ ಅವಳು ಹೆದರಿದಳು?

   ..............................................................................................................

3. ಅಪ್ಪನಿಗೆ ಎಚ್ಚರವಾದಾಗ ಏನೆಂದರು?

   ..............................................................................................................

**ಕೆಳಗಿನ ಪದಗಳಿಂದ ಸ್ವಂತ ವಾಕ್ಯ ರಚಿಸು.**

ದೊಣ್ಣೆ : ..........................................................

ಭಯ : ..........................................................

# 10. ನೀರು ಕುಡಿಯುವ ಕೌಶಲ

ಆನೆಗಳು ನೀರನ್ನು ಹೇಗೆ ಕುಡಿಯುತ್ತವೆ, ಗೊತ್ತೇ?

ಒಂದು ಆನೆ ಮರಿ ಕಾಡಿನಲ್ಲಿ ಒಂಟಿಯಾಗಿ ಸುತ್ತಾಡುತ್ತಿತ್ತು. ಸುತ್ತಾಡಿ ಅದಕ್ಕೆ ಬಾಯಾರಿಕೆ ಆಯಿತು. ಅದು ಅಲ್ಲೇ ಇದ್ದ ನದಿಯ ಕಡೆಗೆ ಹೊರಟಿತು. ನೀರು ಹೇಗೆ ಕುಡಿಯುವುದು? ಎಂದು ಅದು ಯೋಚಿಸಿತು. ನದಿಯ ನೀರಿನಲ್ಲಿ ಮೊದಲು ಅದು ತನ್ನ ಕಿವಿ ಹಾಕಿತು. ಆದರೆ ಅದಕ್ಕೆ ನೀರು ಕುಡಿಯಲು ಆಗಲಿಲ್ಲ. ನಂತರ ಅದು ನೀರಿನಲ್ಲಿ ತನ್ನ ಬಾಲ ಹಾಕಿತು. ಈ ಬಾರಿಯೂ ಅದಕ್ಕೆ ನೀರು ಕುಡಿಯಲು ಆಗಲಿಲ್ಲ.

ಆ ಸಮಯಕ್ಕೆ ಅದರ ತಾಯಿ, ತನ್ನ ಮರಿಯನ್ನು ಹುಡುಕಿಕೊಂಡು ಅಲ್ಲಿಗೆ ಬಂದಿತು. ತಾಯಿ, ಮರಿ ಆನೆಯ ಅದರ ಸೊಂಡಿಲನ್ನು ಎತ್ತಿ ನದಿಯ ನೀರಿನಲ್ಲಿ ಹಾಕಿತು. ಆನೆ ಮರಿ ನಿಧಾನವಾಗಿ ಸೊಂಡಿಲಿನಿಂದ ನೀರನ್ನು ಸುರ್ - ಸುರ್ ಎಂದು ಹೀರಿಕೊಂಡು ಕುಡಿಯಿತು. ಅದರ ಬಾಯಾರಿಕೆ ನೀಗಿತು.

ಅಂದಿನಿಂದ ಮರಿ ಆನೆ ಯಾರ ಸಹಾಯವೂ ಇಲ್ಲದೆ, ತಾನೇ ನದಿಯಲ್ಲಿ ತನ್ನ ಪುಟ್ಟ ಸೊಂಡಿಲಿನಿಂದ ನೀರು ಕುಡಿಯುವುದನ್ನು ಕಲಿಯಿತು.

1. ಮರಿ ಆನೆ ನೀರು ಕುಡಿಯಲು ಹೇಗೆ ಪ್ರಯತ್ನ ಮಾಡಿತು ?

   ..........................................................

   ..........................................................

2. ತಾಯಿ ಆನೆ ಮರಿ ನೀರು ಕುಡಿಯಲು ಹೇಗೆ ಸಹಾಯಮಾಡಿತು?

   ..........................................................

# 11. ಗೆಳೆತನ

ಒಂದು ಕಾಡಿನಲ್ಲಿ ಜಿಂಕೆ, ಮೊಲ ಮತ್ತು ಆಮೆ ಗೆಳೆಯರು. ಕಾಡಿನ ಮಧ್ಯೆ ಒಂದು ನದಿ. ಆ ನದಿಯ ದಡದಲ್ಲಿ ಮೂವರು ಗೆಳೆಯರೂ ಪ್ರತಿದಿನ ಭೇಟಿಯಾಗುತ್ತಿದ್ದವು. ತಮಗೆ ದೊರೆತ ಆಹಾರವನ್ನು ಹಂಚಿಕೊಂಡು ತಿನ್ನುತ್ತಿದ್ದವು. ಒಬ್ಬ ಬೇಟೆಗಾರ ಇವರನ್ನು ಹೇಗಾದರೂ ಹಿಡಿಯಬೇಕೆಂದು ನದಿಯ ದಂಡೆಗೆ ಬಂದನು. ಇದನ್ನು ಗಮನಿಸಿದ ಕಾಗೆ '***ಪುರ್***... ಎಂದು ಹಾರಿ ಮರದ ಮೇಲೆ ಕುಳಿತಿತು. ಜಿಂಕೆ '***ಛಂಗ್***... ಎಂದು ನೆಗೆದು ಓಡಿ ಹೋಯಿತು. ಆದರೆ ಪಾಪ, ಆಮೆಗೆ ಓಡಲು ಆಗಲಿಲ್ಲ. ಬೇಟೆಗಾರ ಆಮೆಯನ್ನು ಹಿಡಿದೇ ಬಿಟ್ಟ. ಇದನ್ನು ನೋಡಿದ ಜಿಂಕೆ ಮತ್ತು ಕಾಗೆ, ಗೆಳೆಯ ಆಮೆಯನ್ನು ಬೇಟೆಗಾರನಿಂದ ಹೇಗಾದರೂ ಬಿಡಿಸಬೇಕೆಂದು ಒಂದು ಉಪಾಯ ಮಾಡಿದವು.

ಸ್ವಲ್ಪ ದೂರದಲ್ಲಿ ಜಿಂಕೆ ಸತ್ತಂತೆ ಮಲಗಿತು. ಕಾಗೆ ಅದರ ಮೈಮೇಲೆ ಕುಳಿತು ಅದನ್ನು ಕುಕ್ಕುತ್ತಿರುವಂತೆ ನಟನೆ ಮಾಡಿತು. ಬೇಟೆಗಾರ ಇದನ್ನು ನೋಡಿ '***ಓಹ್***! ಒಳ್ಳೆಯ ಬೇಟೆ ಸಿಕ್ಕಿತು ಎಂದುಕೊಂಡು ತನ್ನ ಕೈಲಿದ್ದ ಆಮೆಯನ್ನು ಕೆಳಗಿಳಿಸಿದ. ಅವನು ಜಿಂಕೆಯ ಬಳಿ ಬರುವುದನ್ನು ಕಾಯುತ್ತಿದ್ದ ಕಾಗೆ ಪುರ್ ಎಂದು ಮೇಲೆ ಹಾರಿತು. ಹಾರಿ ಹೋಗಿ ಆಮೆಯನ್ನು ನದಿಗೆ ತಳ್ಳಿತು. ಜಿಂಕೆ ಚಿಮ್ಮುತ್ತ, ನೆಗೆಯುತ್ತ ಓಡಿ ಹೋಯಿತು. ಮೂವರು ಗೆಳೆಯರೂ ಬೇಟೆಗಾರನಿಂದ ಪಾರಾದರು. ಸಂತೋಷದಿಂದ ಮತ್ತೆ ಒಂದಾದರು. ಜಿಂಕೆಯ ಬೆನ್ನ ಮೇಲೆ ಆಮೆ ಕುಳಿತು, ಆಮೆಯ ಬೆನ್ನ ಮೇಲೆ ಕಾಗೆ ಕುಳಿತಿತು.

*"ಓ ಹ್ಹೋ ಹೋ!..... ಹುಯ್ ಹುಯ್ ...... ಕಾಕಾ ...."* ಎಂದು *ಹಾಡುತ್ತಾ ಸಾಗಿದವು.*

ಈ ಪದಗಳಿಂದ ಸ್ವಂತ ವಾಕ್ಯ ರಚಿಸಿ.

ಬೇಟೆಗಾರ : ...............................................................

ಸಂತೋಷ : ...............................................................

ನದಿಯ ದಡ : ...............................................................

# 12. ಕಾಡಿನಲ್ಲಿ ರಜನಿ!

ಒಂದು ದಿನ ರಜನಿ ಎಂಬ ಹುಡುಗಿಯು ಮಧ್ಯರಾತ್ರಿಯಲ್ಲಿ ಕಾಡಿಗೆ ಹೋಗಿದ್ದಳು. ಸುತ್ತಲೂ ಬರೀ ಕತ್ತಲು! ಅಸ್ಪಷ್ಟ ಶಬ್ದಗಳು, ಕೇಳುತ್ತಿದ್ದವು. ಕತ್ತಲಲ್ಲಿ ದಾರಿ ಕಾಣದೆ ಭಯ ಪಡುತ್ತ ರಾತ್ರಿ ಒಂದು ದೊಡ್ಡ ಮರದ ಕೆಳಗೆ ಮಲಗಿ ಬಿಟ್ಟಳು. ಬೆಳಗಾಯಿತು ಎದ್ದು ನೋಡಿದರೆ ದಟ್ಟವಾದ ಕಾಡು, ದಾರಿ ತಪ್ಪಿದ ರಜನಿಯು ಭಯದಿಂದ ಅಳುತ್ತ ಮುಂದೆ ಸಾಗುತ್ತಿದ್ದಂತೆ ದಾರಿಯಲ್ಲಿ ಒಂದು ಪುಟ್ಟ ಮೊಲವನ್ನು ನೋಡಿದಳು. ಮೊಲವನ್ನು ನೋಡಿದ ರಜನಿಗೆ ತುಂಬಾ ಖುಷಿಯಾಯಿತು.

ಹಾಗೆಯೇ ಉಲ್ಲಾಸದಿಂದ ದಾರಿ ಹುಡುಕುತ್ತಾ ಹೊರಟ ರಜನಿಯು ಒಂದು ರೋಮಾಂಚನಕಾರಿ ದೃಶ್ಯವನ್ನು ನೋಡಿದಳು. ಗರಿಬಿಚ್ಚಿದ ನವಿಲು ನಾಟ್ಯವಾಡುವುದನ್ನು ಮರೆಯಲ್ಲಿಯೇ ನಿಂತು ನೋಡಿದಳು. ಅಷ್ಟರಲ್ಲಿ ನವಿಲು ಕಣ್ಮರೆಯಾಯಿತು. ಹಾಗೆಯೇ ಸಂತೋಷದಿಂದ ಮುಂದೆ ಸಾಗುತ್ತಿದ್ದಂತೆಯೇ ರಜನಿಯು ಒಂದು ಹುಲಿಯನ್ನು ಕಂಡಳು. ಹುಲಿಯನ್ನು ಕಂಡ ತಕ್ಷಣ ರಜನಿಯು ಹೆದರಿ ಜೋರಾಗಿ ಓಡ ತೊಡಗಿದಳು.

ಹುಲಿಯು ರಜನಿಯನ್ನು ಹಿಂಬಾಲಿಸಿತು. ರಜನಿ, ಅಮ್ಮಾ...! ಅಮ್ಮಾ ...! ಎಂದು ಕೂಗುತ್ತಾ ಓಡ ತೊಡಗಿದಳು.

ಅಮ್ಮಾ... ಅಮ್ಮಾ... ಎಂಬ ಕೂಗನ್ನು ಕೇಳಿ ರಜನಿಯ ತಾಯಿಯು ಅವಳನ್ನು ಎಚ್ಚರಿಸಿದರು. ಕಣ್ಣುಬಿಟ್ಟರೆ ರಜನಿ ಮನೆಯಲ್ಲಿ ಹಾಸಿಗೆ ಮೇಲೆ ಮಲಗಿದ್ದಾಳೆ. ಅಯ್ಯೋ ! ಇದು ಕನಸೇ, ಎಂಬ ಪಿಸುನುಡಿ.

ಅಮ್ಮಾ ಏನಾಯ್ತು ಎಂದರು. 'ವಿಚಿತ್ರ ಕನಸು' ಎಂದಳು. ಅಮ್ಮ ಸಮಾಧಾನ ಪಡಿಸಿ, ಶಾಲೆಗೆ ಸಿದ್ಧವಾಗಲು ತಿಳಿಸಿದರು.

ರಜನಿ ಶಾಲೆಗೆ ಹೋಗಿ ತಾನು ಕಂಡ ಕನಸನ್ನು ಸ್ನೇಹಿತರಿಗೆ ಹೇಳಿ ನಗ ತೊಡಗಿದಳು.

ಪ್ರಶ್ನೆಗಳು - ಮೌಖಿಕ

1. ರಜನಿ ಯಾವಾಗ ಕಾಡಿಗೆ ಹೋಗಿದ್ದಳು?
2. ರಜನಿಯು ಕಾಡಿನಲ್ಲಿ ಕಂಡ ಪ್ರಾಣಿಗಳು ಯಾವುವು?
3. ರಜನಿಯು ಕಂಡ ರೋಮಾಂಚನಕಾರಿ ದೃಶ್ಯ ಯಾವುದು ?
4. ನೀನು ಕಂಡ ಕನಸು ನಿನಗೆ ನೆನಪಿದೆಯೆ ? ಹೇಳುವೆಯಾ ?

# 13. ಹೂಗಳ ಅಂದ-ಚಂದ

ನಿಮ್ಮೂರಲ್ಲಿ ಹೂವಿನ ಅಂಗಡಿ ನೋಡಿದ್ದೀರಾ? ಅಲ್ಲಿ ಅದೆಷ್ಟು ವಿಧದ ಹೂಗಳು! ಬಣ್ಣ ಬಣ್ಣದ ಅಂದದ ಹೂಗಳು, ಏನು ಸುವಾಸನೆ! ಮಲ್ಲಿಗೆ, ಜಾಜಿ, ಸೇವಂತಿಗೆ, ಕನಕಾಂಬರ, ಸ್ಫಟಿಕ, ಸಂಪಿಗೆ, ಗುಲಾಬಿ ..... ಇನ್ನೂ ಎಷ್ಟೋ ವಿಧದ ಹೂಗಳು; ದಾರದಲ್ಲಿ ಕಟ್ಟಿ, ಮೀಟರ್‌ನಲ್ಲಿ ಅಳೆದು ಮಾರುವ ಹೂಗಳನ್ನು ಗೋಪುರದಂತೆ ಜೋಡಿಸಿದೆ. ಇನ್ನೊಂದೆಡೆ ಕೋಲಿನಲ್ಲಿ ಇಳಿಬಿಟ್ಟ ಸುಗಂಧರಾಜ, ಮಲ್ಲಿಗೆ, ಗುಲಾಬಿ... ಇತ್ಯಾದಿ ಹೂಗಳ ಹಾರಗಳು. ಹಾರಗಳ ನಡುವೆ ಅಲಂಕಾರಕ್ಕಾಗಿ ಪೋಣಿಸಿದ ಫಳ ಫಳ ಹೊಳೆಯುವ ಚೆಂಡುಗಳು ಅದೆಷ್ಟು ಚೆನ್ನ ! ಓಹೋ, ಇಲ್ಲಿ ನೋಡಿ, ಬುಟ್ಟಿಗಳಲ್ಲಿ ಅಂದವಾಗಿ ಜೋಡಿಸಿಟ್ಟ ವಿವಿಧ ಹೂ ಗುಚ್ಛಗಳು! ಜ಼ರ್ ಬೆರಾ, ಆಂಥೋರಿಯಂ, ಇಕ್ಸೋರಾ, ಲಿಲ್ಲಿ, ಡೇಲಿಯಾ ... ಇವೆಲ್ಲ ಹೂಗುಚ್ಛಗಳಿಗೆಂದೇ ಬೆಳೆಸುವ ಹೂಗಳು.

ಭಾರತದಲ್ಲಿ ಹೂವುಗಳಿಲ್ಲದೇ ಯಾವ ಹಬ್ಬ, ಪೂಜೆ, ಸಮಾರಂಭಗಳು ಪೂರ್ಣ ವಾಗುವುದಿಲ್ಲ. ರಂಗೋಲಿಯಿಂದ ಮದುವೆಗೆ, ಸಭೆಗೆ, ತೋರಣಗಳಿಗೆ ಹೂವಿನ ಅಲಂಕಾರ ಇರಲೇ ಬೇಕು. ಇತ್ತೀಚೆಗೆ ಹೂಗುಚ್ಛಗಳು ಬಹಳ ಜನಪ್ರಿಯವಾಗಿವೆ. ಶುಭ ಕೋರುವ ಸಂಕೇತವಾಗಿ ಜನರು ಹೂಗುಚ್ಛಗಳನ್ನು ಬಳಸುತ್ತಾರೆ.

ಹೂವು ಪ್ರತಿಯೊಂದು ಗಿಡ, ಬಳ್ಳಿ ಅಥವಾ ಮರಗಳ ಒಂದು ಅಂಗ. ಹೂವಿಲ್ಲದೆ ಕಾಯಿಲ್ಲ, ಕಾಯಾಗದೆ ಹಣ್ಣಿಲ್ಲ. ಹಣ್ಣಿನ ಬೀಜಗಳಿಂದ ಮತ್ತೆ ಹುಟ್ಟುವ ಗಿಡ, ಬಳ್ಳಿಗಳಲ್ಲಿ ಹೂವು ಅರಳುತ್ತದೆ. ನಮ್ಮ ದೇಶದಲ್ಲಿ ಸುಮಾರು 50,000 ವಿಧದ ಹೂಗಳನ್ನು ಬೆಳೆಯಲಾಗುತ್ತಿದೆ. ಹೂ ಕೃಷಿಗಾರಿಕೆ ಇಂದು ಒಂದು ದೊಡ್ಡ ಮಟ್ಟದ ವ್ಯವಹಾರ. ವಿವಿಧ ಹವಾಮಾನಗಳಿಗೆ ತಕ್ಕಂತೆ ಮರುಭೂಮಿಯಲ್ಲಿ, ಪರ್ವತ ಪ್ರದೇಶದಲ್ಲಿ, ಮಳೆ ನಾಡಿನಲ್ಲಿಯೂ ಬೆಳೆಯುವ ಬೇರೆ ಬೇರೆ ಹೂ ಪ್ರಭೇದಗಳನ್ನು ಕಾಣಬಹುದು.

ಕೆಲವು ಹೂಗಳನ್ನು ವರ್ಷವಿಡೀ ಬೆಳೆಸಬಹುದು. ಆದರೆ ಇತರ ಕೆಲವು ಹೂಗಳು ವರ್ಷಕ್ಕೊಮ್ಮೆ ಮಾತ್ರ ಅರಳುತ್ತವೆ. ಇಂತಹ ಅಪರೂಪದ ಹೂಗಳನ್ನು ಅಳಿಸಿ ಹೋಗದಂತೆ ನಾವು ಜಾಗರೂಕತೆಯಿಂದ ಉಳಿಸಿಕೊಳ್ಳಬೇಕು.

ಪ್ರಶ್ನೆಗಳು :

1. ನಿನಗೆ ತಿಳಿದಿರುವ ಹೂಗಳಲ್ಲಿ ಸುವಾಸನೆ ಇರುವ ಮತ್ತು ಸುವಾಸನೆ ಇಲ್ಲದ ಅಲಂಕಾರಿಕ ಹೂಗಳನ್ನು ಪಟ್ಟಿಮಾಡು.

| | | | | | |
|---|---|---|---|---|---|
| ಸುಗಂಧ | | | | | |
| ನಿರ್ಗಂಧ | | | | | |

2. ಹೂವುಗಳಿಂದ ಸುಗಂಧ ದ್ರವ್ಯಗಳನ್ನು ತಯಾರಿಸುತ್ತಾರೆ, ನಿನಗೆ ಗೊತ್ತೇ? ಇದರ ಬಗ್ಗೆ ಮಾಹಿತಿ ಸಂಗ್ರಹಿಸು.

# 14. ಪೈಲ್ವಾನರ ಕಾಳಗ

ಬಪ್ಪು, ಗಪ್ಪು, ಪಪ್ಪು ಮೂವರು ಆತ್ಮೀಯ ಗೆಳಯರು. ಬಪ್ಪು ಬಹಳ (ಸಣ್ಣ) ಸಪೂರವಾಗಿದ್ದ. ಆದರೆ ಚತುರ! ಅವನ ಗೆಳೆಯರೆಲ್ಲ ಬಪ್ಪುವನ್ನು ಕಡ್ಡಿ ಪೈಲ್ವಾನ್ ಎಂದು ಹಾಸ್ಯ ಮಾಡುತ್ತಿದ್ದರು. ಆದರೆ ಬಪ್ಪು ಅವರ ಹಾಸ್ಯಕ್ಕೆ ಕೋಪಿಸಿಕೊಳ್ಳುತ್ತಿರಲಿಲ್ಲ. ತಾನೂ ನಗುತ್ತಾ ಇತರರನ್ನು ನಗಿಸುತ್ತಿದ್ದ.



ಒಂದು ಭಾನುವಾರ ಮೂವರೂ ರಸ್ತೆಯಲ್ಲಿ ಹೋಗುತ್ತಿದ್ದರು. ಊರಿನ ಹೆಸರುವಾಸಿ ಪೈಲ್ವಾನ್ ಪುಂಡರೀಕ ಎದುರಿಗೇ ನಡೆದು ಬರುತ್ತಿದ್ದ. ಇವರಿಗೆ ಗಾಬರಿ! ಪೈಲ್ವಾನ್ ಪುಂಡರೀಕ ಭಾರೀ ಆಸಾಮಿ! ಮೂವರೂ ಗುಸುಗುಸು ಮಾತಾಡಿಕೊಂಡರು. - ಅಬ್ಬಾ! ಅವನು ನೂರು ಕೆಜಿ ಭಾರ ಎತ್ತುತ್ತಾನೆ, ದಿನವೂ 5 ಲೀಟರ್ ಹಾಲು ಕುಡಿಯುತ್ತಾನೆ .

- 'ಅಬ್ಬಾ! ಅವನಿಗೆ ಬಲು ಜಂಭ!.... ಊರ ಮಕ್ಕಳಿಗೆ ಅವನನ್ನು ಕಂಡರೆ ಭಯ, ಜೋರು ಮಾಡಿ ಅವರಿಂದ ಕೆಲಸ ಮಾಡಿಸಿ ಕೊಳ್ಳುತ್ತಾನೆ'. ಅಷ್ಟರಲ್ಲಿ ಎದುರಿಗೇ ಬಂದು ನಿಂತ ಪೈಲ್ವಾನ್‌ಗೆ ಬಪ್ಪು ಕೇಳಿದ- "ನನ್ನ ಜೊತೆ ಕುಸ್ತಿ ಮಾಡುತ್ತೀಯಾ ಪೈಲ್ವಾನ್?". ಅದಕ್ಕೆ ಪುಂಡರೀಕ ಹಹಹ್ಹಾ........ ಎಂದು ನಕ್ಕು 'ನಿನ್ನೊಡನೆ ಕುಸ್ತಿಯೇ? ನೀನೊಬ್ಬ ಸಣಕಲ ಕಡ್ಡಿ! ಎಂದು ಗೇಲಿ ಮಾಡಿದ'. ಆದರೂ ಬಪ್ಪು 'ನನ್ನ ಬಿರುದು 'ಕಡ್ಡಿ ಪೈಲ್ವಾನ್' ನಿನಗೆ ಗೊತ್ತೇ? ಜಂಭ ಪಡದೆ ನನ್ನೊಡನೆ ಕುಸ್ತಿ ಮಾಡು ಎಂದು ಆಹ್ವಾನಿಸಿದ. ಕಡೆಗೆ ಇಬ್ಬರೂ ಕುಸ್ತಿ ಆಡಲು ಒಪ್ಪಿ, ತೊಡೆ ತಟ್ಟತೊಡಗಿದರು. ಪೈಲ್ವಾನ್ ಪುಂಡರೀಕನಿಗೆ ಬಪ್ಪು ಏನು ಮಾಡಿದ ಗೊತ್ತೇ? ಬಪ್ಪು ಪುಂಡರೀಕನ ಹೊಟ್ಟೆಗೆ ಕಚಗುಳಿ ಇಟ್ಟನು.

ಹಿ ಹಿ ಹೂಂ.. ಎನ್ನುತ್ತ ಪುಂಡರೀಕ ಹಾರಿ ಬಿದ್ದ! ಬಪ್ಪು ಮತ್ತಷ್ಟು ಅವನು ಸೊಂಟದ ಅಕ್ಕ - ಪಕ್ಕಕ್ಕೆ ಕಚಗುಳಿ ಇಡುತ್ತಾ ಹೋದ. ಪುಂಡರೀಕ ತಡೆಯಲಾರದೆ ಕುಣಿಯತೊಡಗಿದನು. ಕಡೆಗೆ ಅಸಹಾಯಕನಾಗಿ ಸಾಕಪ್ಪಾ ಇವನ ಸಹವಾಸ ಎಂದು ಸದ್ದಿಲ್ಲದೆ ಕಾಲಿಗೆ ಬುದ್ದಿ ಹೇಳಿದನು.

ಈಗ ಊರ ಮಕ್ಕಳಿಗೆ ಪೈಲ್ವಾನ್ ಪುಂಡರೀಕನನ್ನು ಕಂಡರೆ ಭಯವೇ ಇಲ್ಲ. ಮಕ್ಕಳನ್ನು ಕಂಡರೆ ಅವನಿಗೆ ನಡುಕ! ಅಂತೂ ಇಂತೂ ನಮ್ಮ ಕಡ್ಡಿ ಪೈಲ್ವಾನ್ ಬಪ್ಪುವಿನ ಸಾಹಸ ಹೇಗಿತ್ತು?!!

ಪ್ರಶ್ನೆಗಳು - ಮೌಖಿಕ

1. ಎದುರಿಗೆ ಬಂದ ಪೈಲ್ವಾನ್ ಪುಂಡರೀಕನಿಗೆ ಬಪ್ಪು ಏನೆಂದು ಕೇಳಿದ?
2. ಕುಸ್ತಿಗೆ ಒಪ್ಪಿದ ಪೈಲ್ವಾನ್ ಬಪ್ಪುವಿಗೆ ಏನು ಮಾಡಿದ?
3. ಈ ಕಥೆಯಲ್ಲಿ ಬರುವ ಪಾತ್ರಗಳ ಬಗ್ಗೆ ಚರ್ಚಿಸಿ:

# 15. ಕಪ್ಪು ಬಣ್ಣದ ಬಲೂನು ಮೇಲೇರುವುದೇ?



ದುಂಡುಮಲ್ಲಿಗೆ ಹೆಸರಿಗೆ ತಕ್ಕ ಹಾಗೆ ಸುಂದರವಾದ ಹಳ್ಳಿ. ಮೂರು ವರ್ಷಗಳಿಗೊಮ್ಮೆ ನಡೆಯುವ ಮಾರಿಜಾತ್ರೆ ಸುತ್ತಮುತ್ತಲೂ ಬಹಳ ಪ್ರಸಿದ್ಧವಾಗಿತ್ತು. ಈ ವರ್ಷ ಜಾತ್ರೆಯನ್ನು ನೋಡಲು ಪಕ್ಕದ ಹಳ್ಳಿಯಾದ ತಣ್ಣೀರು ಬಾವಿಯಿಂದ ಕಪ್ಪಣ್ಣ ಬಂದಿದ್ದನು. ಕಪ್ಪಣ್ಣ ಹತ್ತು ವರ್ಷದ ಬಾಲಕ. ಹೆಸರಿಗೆ ತಕ್ಕ ಹಾಗೆ ಕಪ್ಪು. ತೊಳೆದ ಕಂಡೆ ನಾಚುವಷ್ಟು ಕಪ್ಪು. ತನ್ನ ಬಣ್ಣದಿಂದಲೇ ಅವನಿಗೆ ಒಂದು ರೀತಿಯ ಕೀಳರಿಮೆ.

ಕಪ್ಪಣ್ಣ ಜಾತ್ರೆಯ ತುಂಬಾ ಓಡಾಡುತ್ತಿದ್ದನು. ಅವನಿಗೆ ಜಾತ್ರೆಯಲ್ಲಿ ಮಾರುತಿದ್ದ ಗ್ಯಾಸ್ ಬಲೂನುಗಳು ಆಕರ್ಷಕವಾಗಿ ಕಂಡವು. ಅಲ್ಲಿ ಬಣ್ಣ ಬಣ್ಣದ ಬಲೂನುಗಳಿದ್ದವು. ಕೆಂಪು, ನೀಲಿ, ಕೇಸರಿ, ಬಿಳಿ, ಹೀಗೆ ಎಲ್ಲ ರೀತಿಯ ಬಣ್ಣದ ಬಲೂನುಗಳಿದ್ದವು.

ಬಲೂನು ಮಾರುವವನು ತನ್ನ ಸೈಕಲ್ಲಿನಲ್ಲಿ ಎಂತಹುದೋ ಒಂದು ಕಬ್ಬಿಣದ ಪಾತ್ರೆಯನ್ನು ಕಟ್ಟಿಕೊಂಡಿದ್ದನು. ಅದರ ಮೂತಿಗೆ ಬಲೂನನ್ನು ಹಿಡಿದು ಒತ್ತಿದರೆ ಸಾಕು, ಬಲೂನಿನ ತುಂಬ ಎಂತಹುದೋ ಗಾಳಿ ತುಂಬಿಕೊಳ್ಳುತ್ತಿತ್ತು. ಬಲೂನು ಉಬ್ಬಿ ದೊಡ್ಡದಾಗುತ್ತಿತ್ತು. ಅದರ ಬಾಯಿಗೊಂದು ಉದ್ದದ ದಾರವನ್ನು ಕಟ್ಟಿ ಸೈಕಲ್ ಹ್ಯಾಂಡಲ್ಲಿಗೆ ಕಟ್ಟುತ್ತಿದ್ದನು. ಆ ಎಲ್ಲಾ ಬಲೂನುಗಳು ಗಾಳಿಯಲ್ಲಿ ಅತ್ತಿಂದಿತ್ತ ಹಾರಾಡುತ್ತಿದ್ದವು.

ಕಪ್ಪಣ್ಣನು ಬಲೂನಿನವನ ಚೀಲದಲ್ಲಿ ನೋಡಿದನು. ಅಲ್ಲಿ ಎಲ್ಲ ಬಣ್ಣದ ಬಲೂನು ಗಳಿದ್ದವು. ಕಪ್ಪು ಬಣ್ಣದ ಬಲೂನೂ ಇತ್ತು. ಅದನ್ನು ಕಂಡು ಕಪ್ಪಣ್ಣನಿಗೆ ಆಸೆಯಾಯಿತು.

"ಅಣ್ಣಾ ಅಣ್ಣಾ - ಆ ಕಪ್ಪು ಬಲೂನೂ ಸಹಾ ಎಲ್ಲಾ ಬಲೂನುಗಳಂತೆ ಮೇಲೆ ಮೇಲೆ ಏರಬಲ್ಲುದೆ ಅಣ್ಣ?" ಬಿಟ್ಟಕಣ್ಣುಗಳಿಂದ ಕಪ್ಪಣ್ಣ ಕೇಳಿದಾಗ, ಬಲೂನಿನವನು ನಸುನಕ್ಕು, ಈ ಸಲ ಕಪ್ಪು ಬಣ್ಣದ ಬಲೂನನ್ನು ತೆಗೆದುಕೊಂಡು ಅದರಲ್ಲಿ ಗ್ಯಾಸ್ ತುಂಬಿಸಿದನು. ಗ್ಯಾಸ್ ತುಂಬುವಾಗ ಬಲೂನು ದೊಡ್ಡದಾಗುವುದನ್ನು

ನೋಡದನು ಕಪ್ಪಣ್ಣ. ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಬಲೂನಿನವನು ಗ್ಯಾಸನ್ನು ನಿಲ್ಲಿಸಿ ಬಲೂನಿನ ಬಾಯಿಗೆ ಒಂದು ಪುಟ್ಟದಾರವನ್ನು ಕಟ್ಟಿದನು. ಬಲೂನನ್ನು ಕಪ್ಪಣ್ಣನ ಕೈಗೆ ಕೊಟ್ಟನು. "ಪುಟ್ಟ ... ಈ ಬಲೂನನ್ನು ನೀನು ಹಾರಿಬಿಡು! ಮೇಲಕ್ಕೆ ಹಾರಿ ಬಿಡು" ಎಂದನು. ಕಪ್ಪಣ್ಣನಿಗೆ ಎಂದೂ ಇಷ್ಟು ಸಂತೋಷವಾಗಿರಲಿಲ್ಲ. ನಿಂತ ಸ್ಥಳದಲ್ಲಿಯೇ ಒಂದು ಸಲ ಮೇಲಕ್ಕೆ ಹಾರಿ ಎರಡೂ ಕೈಗಳನ್ನು ಬಿಟ್ಟನು. ಕಪ್ಪು ಬಣ್ಣದ ಬಲೂನು ಮೇಲಕ್ಕೆ ಏರತೊಡಗಿತು. ಸುತ್ತಮುತ್ತಲಿದ್ದ ಮರಗಳಿಗಿಂತ ಮೇಲಕ್ಕೆ ಏರಿತು. ಮಾರಿಗುಡಿಯ ಶಿಖರಕ್ಕಿಂತ ಮೇಲಕ್ಕೆ ಏರಿತು. ನೋಡು ನೋಡುತ್ತಿದ್ದಂತೆಯೇ ನೀಲಿಯ ಬಾನಿನಲ್ಲಿರುವ ಬಿಳೀ ಮೋಡಗಳ ಕಡೆಗೆ ತೇಲುತ್ತಾ ಹೋಯಿತು.

"ಪುಟ್ಟಾ .... ಬಲೂನಿನ ಬಣ್ಣ ಯಾವತ್ತೂ ಮುಖ್ಯವಲ್ಲ ಅದರೊಳಗಿರುವ ವಸ್ತುವಿನ ಗುಣ ಲಕ್ಷಣ ಮುಖ್ಯ" ಎನ್ನುತ್ತ ಕಪ್ಪಣ್ಣನ ತಲೆಯನ್ನು ಸವರಿದನು. ಕಪ್ಪಣ್ಣ - 'ಓಹೋ! ಕಪ್ಪುಬಣ್ಣದ ಬಲೂನೂ ಮೇಲೆ ಹಾರುತ್ತೆ, ಎತ್ತರಕ್ಕೆ ಹಾರುತ್ತೆ .... ಹಹಹಹ.... ಹಹ.... ಎಂದು ಹೇಳುತ್ತ, ಕುಣಿಯುತ್ತ, ನೆಗೆಯುತ್ತಾ ತನ್ನ ಸ್ನೇಹಿತರನ್ನು ಹುಡುಕಿಕೊಂಡು ಹೊರಟನು.

ಪ್ರಶ್ನೆಗಳು :

1. ಯಾವ ಯಾವ ಬಣ್ಣದ ಬಲೂನುಗಳನ್ನು ಕಪ್ಪಣ್ಣನು ಜಾತ್ರೆಯಲ್ಲಿ ನೋಡಿದನು?

..................................................................................

..................................................................................

2. ಈ ಕಥೆಯಿಂದ ತಿಳಿದು ಬರುವ ನೀತಿ ಏನು?

..................................................................................

..................................................................................

3. ಈ ಪದಗಳಿಂದ ಸ್ವಂತ ವಾಕ್ಯ ರಚಿಸು.

1. ಬಲೂನು : ..................................................................

..................................................................................

2. ಜಾತ್ರೆ : ....................................................................

..................................................................................

# 16. ಒಮ್ಮತದ ಬಲ



ತಿಂಡಿ ಪೋತ ಗುಂಡಣ್ಣನಿಗೆ ಎರಡು ಮೂರು ದಿನಗಳಿಂದ ಹಸಿವಾಗುತ್ತಿರಲಿಲ್ಲ! ಅವನ ತಾಯಿ ಸ್ವಲ್ಪ ಹೊತ್ತು ಮಲಗಿ ಏಳು ಗುಂಡ, ಹಸಿವಾಗಬಹುದು ಎಂದು ಮಲಗಿಸಿದಳು.

ನಿದ್ದೆಗೆ ಜಾರಿದ ಗುಂಡಣ್ಣನಿಗೆ ಒಂದು ಕನಸು! ಅವನ ಪಂಚೇದ್ರಿಯಗಳೆಲ್ಲ ಪರಸ್ಪರ ಜಗಳವಾಡಿಕೊಂಡು ಮುಖ ತಿರುಗಿಸಿಕೊಂಡಿವೆ! ಕಾರಣ ಕೇಳಿದರೆ ನಾನು ಹೆಚ್ಚು, ನಾನು ಹೆಚ್ಚು, ನನ್ನಿಂದಲೇ ನೀನು ಆಹಾರ ತಿನ್ನತ್ತಿರುವೆ. ನಾವು ಒಬ್ಬೊಬ್ಬರೂ ಸುಮ್ಮನಿದ್ದರೆ ನಿನಗೆ ಏನಾಗಬಹುದು ಎಂದು ಮುಷ್ಕರ ಹೂಡಿದ್ದೇವೆ ಎಂದವು.

ಆಗ ಗುಂಡಣ್ಣ ಕಣ್ಣು, ಕಿವಿ, ಮೂಗು, ಚರ್ಮ ಮತ್ತು ನಾಲಿಗೆ ಈ ಪಂಚೇಂದ್ರಿಯಗಳಿಗೆ ವಿನಂತಿಸಿಕೊಂಡ - ನಿಮ್ಮ ಮುಷ್ಕರದಿಂದ ನಾನು ನಿತ್ರಾಣನಾಗಿದ್ದೇನೆ. ನೀವು ಐವರೂ ಸಹಕರಿಸಿದರೆ ನಾನು ಬದುಕಿ ಉಳಿಯುತ್ತೇನೆ. ಒಮ್ಮತದಲ್ಲಿ ಬಲವಿದೆ ಎನ್ನುವ ಮಾತು ಗೊತ್ತೇ ನಿಮಗೆ? ನೀವು ಎಲ್ಲರೂ ಅನುಮತಿ ಕೊಟ್ಟರೆ ಮಾತ್ರ ನಾನು ಆಹಾರ ಸೇವಿಸಬಹುದು, ದಯವಿಟ್ಟು ಸಹಕರಿಸಿ .

ಅದು ಹೇಗೆ?? ಎಂದವು ಒಕ್ಕೊರಲಿನಿಂದ ಐದೂ ಇಂದ್ರೀಯಗಳು ನೋಡಿದ್ದೀರಾ ನೀವೆಲ್ಲರೂ ಒಟ್ಟಿಗೆ ಕೂಗುವ ದನಿ ಎಷ್ಟು ಇಂಪಾಗಿದೆ! ಹಾಗೆಯೇ ನೀವು ಐವರೂ ಪರಸ್ಪರ ಒಮ್ಮತದಿಂದ ಸಹಕರಿಸಿದರೆ ನಾನು ಆಹಾರ ತಿನ್ನಬಹುದು. ಅದು ಹೇಗೆಂದರೆ ಅಮ್ಮ ತಿಂಡಿ ತಿನ್ನು ಎಂದಾಗ ಕಿವಿ ಕೇಳಿಸಿಕೊಳ್ಳುತ್ತದೆ, ತಕ್ಷಣ ಕಿವಿಗೆ ಬಿದ್ದ ವಿಷಯ ಮಿದುಳಿಗೆ ರವಾನೆಯಾಗುತ್ತದೆ. ಮಿದುಳಿನಿಂದ ಬಂದ ಸಂಕೇತದಿಂದ ಕಣ್ಣುಗಳು ತಿಂಡಿಯನ್ನು ನೋಡುತ್ತವೆ, ಜೊತೆಗೆ ಮೂಗು ತಿಂಡಿಯ ವಾಸನೆ/ಪರಿಮಳವನ್ನು ಗುರುತಿಸುತ್ತದೆ. ಮೂಗಿಗೆ ಪರಿಮಳ ಬಂದ ತಕ್ಷಣ ತನಗೆ ಗೊತ್ತಿಲ್ಲದಂತೆಯೇ ಕೈ ತಿಂಡಿಯನ್ನು ಕೈಗೆ ತೆಗೆದುಕೊಂಡಾಗ ಚರ್ಮ ಇದರ ನವಿರನ್ನು ತಿಳಿದು ಬಾಯಿಗೆ ಕಳುಹಿಸುತ್ತದೆ. ಬಾಯಿಗೆ ಹೋದ ನಂತರ ನಾಲಿಗೆಗೆ ತಿಂಡಿಯ ರುಚಿ ತಿಳಿಯುತ್ತದೆ.

ತನ್ನ ಸ್ನೇಹಿತ ಹಲ್ಲಿನ ಸಹಾಯದಿಂದ ಜಗಿದು ಜಗಿದು ತಿಂದಾಗ ಅದರ ರುಚಿ ಮನಸ್ಸಿಗೂ, ದೇಹಕ್ಕೂ ಚೈತನ್ಯ ನೀಡುತ್ತದೆ. ಆಹಾ! ಎಂತಹ ರುಚಿ! ಎಂದು ಇನ್ನಷ್ಟು ತಿಂಡಿಯನ್ನು ತಿಂದಾಗ ಹೊಟ್ಟೆಯ ಹಸಿವು ಮಾಯ! ಸುಸ್ತು - ನಿತ್ರಾಣಗಳು ಪರಾರಿ! ಕೇಳಿಸಿಕೊಂಡಿರಾ, ನೀವು ಐವರು ಸೇರಿದರೆ ದೇಹಕ್ಕೆ ಹೇಗೆ ಆಹಾರ ಪೂರೈಕೆಯಾಗುತ್ತದೆ ಎಂದು? ಎಂದು ಗುಂಡಣ್ಣ ವಿವರಿಸಿದ. ಹೌದು ಹೌದು ಎಂದು ಕಣ್ಣು ತನ್ನ ರೆಪ್ಪೆ ಮಿಟುಕಿಸಿತು! ಕಿವಿಗಳೆರಡು ಸೇರಿ ತಲೆಯಾಡಿಸಿದವು. ಕೈ ಚಪ್ಪಾಳೆ ತಟ್ಟಿದವು!

ಅಷ್ಟರಲ್ಲಿ ಅಮ್ಮ ಗುಂಡಣ್ಣನಿಗೆ ಬಿಸಿ ಬಿಸಿ ಬೋಂಡ ತಂದಳು. ಮೂಗಿಗೆ 'ಘಂ' ಎನ್ನುವ ವಾಸನೆ ತಿಳಿಯಿತು. ಗುಂಡಣ್ಣನ ಕನಸು ಮುಗಿಯಿತು, ಎಚ್ಚರವಾದಾಗ ಬಿಸಿ ಬೋಂಡಾವನ್ನು ನಾಲಿಗೆ ಚಪ್ಪರಿಸಿತು.

ಗುಂಡಣ್ಣನ ಪಂಚೇಂದ್ರಿಯಗಳು ಮುಷ್ಕರ ನಿಲ್ಲಿಸಿದವು ಒಮ್ಮತದಿಂದ ಸಹಕರಿಸಿ ಗುಂಡಣ್ಣ ಮತ್ತೆ ಆಹಾರ ಸೇವಿಸುವಂತೆ ಮಾಡಿದವು.

ಕಿವಿ, ಕಣ್ಣು, ಮೂಗು, ಚರ್ಮ, ನಾಲಿಗೆ - ಪಂಚೇಂದ್ರಿಯಗಳು ಒಟ್ಟಿಗೇ ಜೈಕಾರ ಕೂಗಿದವು

***ನಾವೆಲ್ಲರೂ ಗೆಳೆಯರು, ನಮಗಿದೆ ಒಮ್ಮತ ಒಂದೇ ಅಭಿಪ್ರಾಯ.***

## ಪ್ರಶ್ನೆಗಳು :

1. ನಮ್ಮ ಪಂಚೇಂದ್ರಿಯಗಳು ಯಾವುವು?

..............................................................................................

..............................................................................................

2. ಪಂಚೇಂದ್ರಿಯಗಳು ನಮ್ಮ ದೇಹದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುತ್ತವೆ?

..............................................................................................

..............................................................................................

3. ಈ ಕೆಳಗಿನ ಸನ್ನಿವೇಶಗಳಲ್ಲಿ ಬಳಸುವ ಇಂದ್ರಿಯಗಳು ಯಾವುವು '✓' ಚಿಹ್ನೆಯಿಂದ ಗುರುತಿಸಿ

| | ನೋಡು | ಕೇಳು | ವಾಸನೆ | ರುಚಿ | ಸ್ಪರ್ಷ |
|---|---|---|---|---|---|
| ಉದಾ : ಅಂಗಡಿಯಲ್ಲಿ ಬಟ್ಟೆ ಕೊಳ್ಳುವಾಗ | ✓ | ✓ | × | × | ✓ |
| 1. ಹೋಟೆಲಿನಲ್ಲಿ ತಿಂಡಿ ತಿನ್ನುವಾಗ | ◯ | ◯ | ◯ | ◯ | ◯ |
| 2. ತರಗತಿಯಲ್ಲಿ ಕಲಿಯುವಾಗ | ◯ | ◯ | ◯ | ◯ | ◯ |
| 3. ರಸ್ತೆ ದಾಟುವಾಗ | ◯ | ◯ | ◯ | ◯ | ◯ |
| 4. ಹೂ, ಅಗರಬತ್ತಿ ಕೊಳ್ಳುವಾಗ | ◯ | ◯ | ◯ | ◯ | ◯ |
| 5. ಟೆಲಿಫೋನ್ ಬಳಸುವಾಗ | ◯ | ◯ | ◯ | ◯ | ◯ |

ನಿಮ್ಮ ಉತ್ತರಗಳನ್ನು ಗುಂಪಿನಲ್ಲಿ ಚರ್ಚಿಸಿ

# 17. ನಮ್ಮ ರಾಷ್ಟ್ರ ಪ್ರಾಣಿ ಹುಲಿ



ನೀವು  ಯನ್ನು ನೋಡಿದ್ದೀರಾ? ಅದರ ಘರ್ಜನೆಯನ್ನು ಕೇಳಿದ್ದೀರಾ? ಕಾಡಿನ ರಾಜ  ! ಅದರ ಶಕ್ತಿ, ಸೊಬಗು, ಚುರುಕಿನ ನಡೆ ಎಲ್ಲವೂ ಬಲು ಚೆಂದ. ಆದರೆ ಅದರ ಹತ್ತಿರ ಹೋಗಲು ಭಯ. ಯಾಕೆಂದರೆ ಅದೊಂದು ವನ್ಯಮೃಗ, ಇತರ ಪ್ರಾಣಿಗಳನ್ನು ಬೇಟೆಯಾಡಿ ತಿಂದು ಬದುಕುವ ಪ್ರಾಣಿ. ಎಲ್ಲಾ ಬಗೆಯ ಹವಾಮಾನಕ್ಕೂ ಒಗ್ಗಿಕೊಳ್ಳುವ ಗಟ್ಟಿಜೀವಿ. ಇಡೀ ಬೆಳಿಗ್ಗೆ, ನಿದ್ದೆ ಮಾಡಿ ರಾತ್ರಿ ಬೇಟೆಯ ಸಂಚಾರಕ್ಕೆ ಹೊರಡುತ್ತವೆ.

ಭಾರತ, ನೇಪಾಲ, ಬಾಂಗ್ಲಾದೇಶ, ಮಯನ್ಮಾರ್, ಶ್ರೀಲಂಕಾ ಹಾಗೂ ರಷ್ಯ ದೇಶಗಳಲ್ಲಿ ಹೆಚ್ಚು  ಸಂತತಿ ಕಂಡುಬಂದಿವೆ. ಆದರೆ ಪ್ರಪಂಚದಲ್ಲಿರುವ ಗಳಲ್ಲಿ ಶೇ.75ರಷ್ಟು ಭಾರತದಲ್ಲಿವೆ. ಪ್ರಸಿದ್ಧಿ ಪಡೆದಿರುವ **ಬೆಂಗಾಲ್** ಯನ್ನು ನಮ್ಮ ರಾಷ್ಟ್ರಪ್ರಾಣಿಯಾಗಿ 1972 ರಿಂದ ಗುರುತಿಸಲಾಗಿದೆ.  ಏಕಾಂಗಿ ಜೀವಿ. ಮರಿ ಹಾಕುವವರೆಗೂ ಒಟ್ಟಿಗೆ ಇರುವ ಗಂಡು-ಹೆಣ್ಣು, ಮರಿ ಹಾಕಿದ ಒಂದೂವರೆ ವರ್ಷಗಳಲ್ಲಿ ಬೇರೆಯಾಗಿ ಮತ್ತೆ ಏಕಾಂತವಾಸ ಮಾಡುತ್ತವೆ. ಸಾಮಾನ್ಯವಾಗಿ ಒಮ್ಮೆಗೆ ಯು3 ರಿಂದ 6 ಮರಿಗಳಿಗೆ ಜನ್ಮ ನೀಡುತ್ತವೆ. ಒಮ್ಮೊಮ್ಮೆ ಬಿಳಿ ಗಳೂ ಜನಿಸುವುದೂ ಉಂಟು. ಭಾರತದಲ್ಲಿ ಮಧ್ಯಪ್ರದೇಶದಲ್ಲಿ ಬಿಳಿ ಗಳು ಹೆಚ್ಚಾಗಿ ಕಂಡುಬಂದಿವೆ. ಗಂಡು ಯ ತೂಕ 140ಕೆ.ಜಿ. ಮತ್ತು ಉದ್ದ 2.6 ಮೀ.ಗಳಷ್ಟು ಅವು ಗಂಟೆಗೆ 60 ಕಿ.ಮೀ. ವೇಗದಲ್ಲಿ ಓಡುತ್ತವೆ! ಸಾಮಾನ್ಯ 13 ರಿಂದ 15 ವರ್ಷಗಳು ಬದುಕುತ್ತವೆ.

ಒಂದೊಮ್ಮೆ ಪ್ರಪಂಚದಲ್ಲಿ ಒಂದು ಲಕ್ಷ  ಗಳಿದ್ದವಂತೆ, ಆದರೆ ಅದು ನಲವತ್ತು ಸಾವಿರಕ್ಕೆ ಇಳಿಯಿತು. ಈಗಿನ ಸಮೀಕ್ಷೆಯ ಪ್ರಕಾರ ಕೇವಲ 3900  ಗಳು ಕಂಡುಬಂದಿವೆ.

ಹಿಂದೆ ರಾಜಮಹಾರಾಜರ ಕಾಲದಲ್ಲಿ ಅವರ ಶೌರ್ಯ ಪ್ರದರ್ಶನಕ್ಕೆ ಗಳನ್ನು ಬೇಟೆಯಾಡುತ್ತಿದ್ದರು. ಈಗ ಕಳ್ಳ ಬೇಟೆಗಾರರು ಹುಟ್ಟಿಕೊಂಡಿದ್ದಾರೆ. ಯ ಚರ್ಮ, ಉಗುರು, ಕೂದಲು ಇತ್ಯಾದಿಗಳಿಗೆ ಭಾರೀ ಬೇಡಿಕೆ ಇರುವುದರಿಂದ ಕಳ್ಳತನದಿಂದ ಗಳನ್ನು ಬೇಟೆಯಾಡುತ್ತಿದ್ದಾರೆ. ಅದಲ್ಲದೆ ಅರಣ್ಯನಾಶ ಹೆಚ್ಚಾಗುತ್ತಿರುವುದರಿಂದ ಗಳಿಗೆ ಆವಾಸಸ್ಥಾನಗಳು ಕಡಿಮೆಯಾಗಿ ಅವುಗಳ ಸಂತತಿ ಕ್ಷೀಣಿಸುತ್ತಿವೆ.

ಗಳ ಸಂತತಿ ಕ್ಷೀಣಿಸಬಾರದೆಂದು ನಮ್ಮ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಯಸಂತತಿ ಹೆಚ್ಚಾಗಿದೆ ಎಂದು ವರದಿಯಾಗಿದೆ.

## ಕರ್ನಾಟಕದಲ್ಲಿ

ಭಾರತದ ಅತ್ಯಂತ ಹೆಚ್ಚು ಹುಲಿಗಳು ವಾಸವಾಗಿರುವುದು ಕರ್ನಾಟಕದ ಬಿ.ಆರ್.ಪ್ರಾಜೆಕ್ಟ್, ಮಲೆಮಹದೇಶ್ವರ, ಭದ್ರ ಅರಣ್ಯ, ದಾಂಡೇಲಿ, ಬಂಡೀಪುರ, ನಾಗರಹೊಳೆಯ ಅರಣ್ಯಧಾಮಗಳಲ್ಲಿ ಹುಲಿಸಂತತಿಗಳಿವೆ. ರಾಜ್ಯದಲ್ಲಿ ಸುಮಾರು 406 ಹುಲಿಗಳಿವೆ ಎಂದು ಅಂದಾಜು. ಹುಲಿ ಸಂತತಿಯಲ್ಲಿ ನಾಗರಹೊಳೆ ಪ್ರಸಿದ್ಧಿಯಾಗಿದೆ. ಈ ಬಾರಿ ಗಣತಿಯಲ್ಲಿ 91 ಹುಲಿಗಳು ಪತ್ತೆಯಾಗಿವೆ. ವ್ಯಾಘ್ರ ಸಂತತಿ ಹೆಚ್ಚಿಸುವಲ್ಲಿ ಅರಣ್ಯದ ಅಂಚಿನಲ್ಲಿರುವ ಗ್ರಾಮಗಳ ಪಾತ್ರ ಬಹಳ ದೊಡ್ಡದು. ಇಲ್ಲಿ ಆಗಾಗ್ಗೆ ರಾತ್ರಿ ಇಡೀ ನಡೆಯುವ ಜಾತ್ರೆಗಳು, ದೊಂಬರಾಟ, ವಾಹನಗಳ ಸಂಚಾರ ಮುಂತಾದವು. ಹುಲಿಗಳ ಜೀವನಕ್ಕೆ ಅಡ್ಡಿ ಉಂಟುಮಾಡುತ್ತಿವೆ.

ಇತ್ತೀಚೆಗೆ ಅರಣ್ಯದ ಅಂಚಿನ ಗ್ರಾಮಗಳಲ್ಲಿ ಇದರ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹುಲಿ ಸಂಚರಿಸುವ ಹಾದಿಗಳಲ್ಲಿ ಸಿಸಿ ಟಿ.ವಿ, ಕ್ಯಾಮರಾಗಳನ್ನು ಅಳವಡಿಸಿ, ನಂತರ ಅವುಗಳಿಂದ ಹುಲಿಗಳ ಚಲನವಲನಗಳನ್ನು ತಿಳಿಯುವ ಅವಕಾಶಗಳನ್ನು ಶಾಲಾ ವಿದ್ಯಾರ್ಥಿಗಳಿಗೂ ಒದಗಿಸಲಾಗುತ್ತಿದೆ. ಹುಲಿ ಕುರಿತ ಸಾಕ್ಷ್ಯ ಚಿತ್ರಗಳಿಂದಲೂ ಜನಸಾಮಾನ್ಯರಿಗೆ ನಮ್ಮ ರಾಷ್ಟ್ರಪ್ರಾಣಿ ಹುಲಿಯ ಬಗ್ಗೆ ಇನ್ನೂ ಹೆಚ್ಚಿನ ಅರಿವು ಮೂಡಿಸಬಹುದು.

ಪ್ರತಿ ಜುಲೈ 29ನೇ ತಾರೀಖು ಅಂತರಾಷ್ಟ್ರೀಯ ಹುಲಿ ದಿನಾಚಾರಣೆ.

**ಪ್ರಶ್ನೆಗಳು :**

1. ಯಾವ ಯಾವ ದೇಶಗಳಲ್ಲಿ ಹುಲಿ ಸಂತತಿ ಕಂಡುಬಂದಿದೆ?

.................................................................................................

.................................................................................................

2. ಸಾಮಾನ್ಯವಾಗಿ ಹುಲಿಗಳು ಎಷ್ಟು ವರ್ಷ ಬದುಕುತ್ತವೆ?

.................................................................................................

.................................................................................................

3. ಕರ್ನಾಟಕದಲ್ಲಿ ಹುಲಿಯ ಸಂತತಿಯ ಬಗ್ಗೆ ಚರ್ಚಿಸಿ.

.................................................................................................

.................................................................................................

.................................................................................................

# 18. ಜೇನು ನೊಣಗಳ ಮಾತು

ಜೇನು ನೋಣಗಳನ್ನು ನೋಡಿದ್ದೀರಾ? ಹೂವಿನ ರಸವೆ ಅವುಗಳ ಆಹಾರ!



(ನಾವು ಒಬ್ಬರೇ ಇದ್ದಾಗ ಎಷ್ಟೋ ಸಲ ನಮಗೆ ಅನ್ನಿಸುತ್ತದೆ-ಯಾರಾದರೂ ಗೆಳೆಯ/ಗೆಳತಿ ಬರಬಾರದೆ? ಅವನ/ಅವಳ ಜೊತೆಗೆ ಚೆನ್ನಾಗಿ ಮಾತನಾಡಬಹುದು ಅಂತ.) ಸ್ವಲ್ಪ ಯೋಚಿಸಿ ನೋಡಿ! ನಮ್ಮ ಹಾಗೆಯೇ ಪಶು-ಪಕ್ಷಿಗಳು, ಕ್ರಿಮಿ-ಕೀಟಗಳಿಗೂ ಮಾತನಾಡಬೇಕು ಅನ್ನಿಸುವುದಿಲ್ಲವೇ. ಜೇನುನೊಣಗಳು ಸಹ ತಮ್ಮ ಸ್ನೇಹಿತರಿಗೆ ಸಿಹಿಯಾದ ರಸಭರಿತ ಹೂವುಗಳು ಎಲ್ಲಿವೆ ಎಂದು ತಿಳಿಸಲು ಬಯಸುತ್ತವೆ.

ಜೇನುನೊಣಗಳಿಗೆ ಊಟ(ಹೂವಿನ ರಸ)ಎಲ್ಲಿದೆ ಎಂದು ಗೊತ್ತಾದಾಗ ಅದು ಪುನಃ ತನ್ನ ಜೇನು ಗೂಡಿಗೆ ಬರುತ್ತದೆ ಮತ್ತು ನಂತರ ತನ್ನ ಸ್ನೇಹಿತರ ಮುಂದೆ ಗುಂಡು-ಗುಂಡಗೆ ಸುತ್ತಿ ಭೋಜನದ ಸ್ಥಳವನ್ನು ತಿಳಿಸುತ್ತದೆ. ಊಟ ತಿನ್ನಬೇಕಾದ ಜಾಗ ಗೂಡಿನ ***ಬಲಗಡೆ*** ಇದ್ದರೆ ಅದು ಗಡಿಯಾರದ ಮುಳ್ಳು ತಿರುಗುವ ದಿಕ್ಕಿನಲ್ಲಿ ಸುತ್ತುತ್ತದೆ ಮತ್ತು ಊಟದ ಜಾಗ ಗೂಡಿನ ***ಎಡಗಡೆ*** ಇದ್ದರೆ ಅದು ಗಡಿಯಾರದ ಮುಳ್ಳು ತಿರುಗುವ ವಿರುದ್ಧ ದಿಕ್ಕಿಗೆ ಸುತ್ತು ಹೊಡೆಯುತ್ತದೆ. ಊಟ ಸುಮಾರು 100 ಮೀ. ದೂರದಲ್ಲಿದ್ದರೆ ಅದು ಚಕ್ರದಂತೆ ಗುಂಡಗೆ ಸುತ್ತುತ್ತದೆ. ಊಟ 100 ಮೀ.ಗಿಂತ ಹೆಚ್ಚು ದೂರದಲ್ಲಿದ್ದರೆ ಅದು 8ರ ಆಕಾರದಲ್ಲಿ ಸುತ್ತುತ್ತದೆ. ಆಶ್ಚರ್ಯ! ಮಾತಿಲ್ಲದೆಯೇ ವಿಷಯ ತಿಳಿಸುವ ರೀತಿ!

ಒಂದು ಜೇನು ಗೂಡಿನಲ್ಲಿ ಸಾವಿರಾರು ಜೇನುನೊಣಗಳು ಇರುತ್ತವೆ. ಆದರೆ ***ರಾಣಿಜೇನುನೊಣ*** ಒಂದೇ! ಜೇನುಗೂಡಿನಲ್ಲಿ ಉಳಿದವುಗಳೆಲ್ಲಾ ***ನೌಕರ (ಕೆಲಸಮಾಡುವ) ಜೇನುನೊಣಗಳಾಗಿರುತ್ತವೆ***. ಅವು ಊಟವನ್ನು (ಹೂವಿನರಸ) ಹುಡುಕುವ ಕೆಲಸವನ್ನು ಮಾಡುತ್ತವೆ. ***ಗಂಡು ಜೇನುನೊಣಗಳು*** ಬೇರೆ ಪ್ರಾಣಿಗಳಿಂದ ಗೂಡನ್ನು ರಕ್ಷಿಸುತ್ತವೆ. ರಾಣಿಜೇನು ಮೊಟ್ಟೆಗಳನ್ನು ಇಡುತ್ತದೆ.

**1. ಜೇನು ನೊಣಗಳಿಗೆ ಆಹಾರ ಸಿಗುವ ಸೂಚನೆಗಳನ್ನು ಹೊಂದಿಸಿ.**

| | | |
|---|---|---|
| ಗೂಡಿನ ಎಡಗಡೆ ಇದ್ದಾಗ | * * | '8' ರ ಆಕಾರ |
| ಗೂಡಿನ ಬಲಗಡೆ ಇದ್ದಾಗ | * * | ಚಕ್ರದಂತೆ ಗುಂಡಗೆ |
| ಸುಮಾರು 100 ಮೀ ದೂರ ಇದ್ದಾಗ | * * | ಗಡಿಯಾರದ ಮುಳ್ಳು ವಿರುದ್ಧ ದಿಕ್ಕು |
| 100 ಮೀ ಗಿಂತ ಹೆಚ್ಚು ದೂರ ಇದ್ದಾಗ | * * | ಗಡಿಯಾರದ ಮುಳ್ಳು ತಿರುಗುವ ದಿಕ್ಕು |

**2. ನೌಕರ ಜೇನು, ರಾಣಿ ಜೇನು, ಗಂಡು ಜೇನುಗಳ ಕೆಲಸಗಳೇನು ? (ಮೌಖಿಕ)**

## ಸರ್ವಜ್ಞನ ವಚನಗಳು

**ಕನ್ನಡ ವಚನಕಾರರಲ್ಲಿ ಕವಿ ಸರ್ವಜ್ಞ ಈಗಲೂ ಉನ್ನತ ಸ್ಥಾನದಲ್ಲಿ ನೆನಪಿನಲ್ಲಿ ಉಳಿಯುವ ಕವಿ. ತ್ರಿಪದಿಯಲ್ಲಿ (ಮೂರು ಸಾಲುಗಳು) ರಚಿಸಿರುವ ಅವನ ವಚನಗಳು ಸರಳವಾಗಿ 'ಮಾನವ ಜನ್ಮ ದೊಡ್ಡದು' ಎಂಬುದನ್ನು ಸಾರುತ್ತವೆ. ಈ ವಚನವನ್ನು ಕಂಠಪಾಠ ಮಾಡಿ ಆಗಾಗ್ಗೆ ಹೇಳಿಕೋ:**

**ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ**
**ಅನ್ನವುಂಟಾದ ರುಣಉಂಟು, ಜಗದೊಳಗೆ**
**ಅನ್ನವೇ ದೈವ ಸರ್ವಜ್ಞ॥**

ಅನ್ನ ಜೀವ ಉಳಿಯಲು ಆಧಾರ, ಅನ್ನ ಊಟ ಮಾಡಿದರೆ ಪ್ರಾಣರಕ್ಷಣೆ. 'ಈ ಜಗತ್ತಿನಲ್ಲಿ **ಅನ್ನವೇ ದೇವರು**' ಅನ್ನವನ್ನು **ಗೌರವದಿಂದ ಬಳಸು, ಯಾವತ್ತೂ ಕಡೆಗಣಿಸಬೇಡ.**

**ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ,**
**ಕೊಟ್ಟದ್ದು ಕೆಟ್ಟಿತೆನಬೇಡ, ಮುಂದೆ**
**ಕಟ್ಟಿಹುದು ಬುತ್ತಿ, ಸರ್ವಜ್ಞ॥**

ಮತ್ತೊಬ್ಬರಿಗೆ ನೀಡಿದ ಫಲ ಕೊಟ್ಟವನಿಗೆ ಸಿಗುತ್ತದೆ, ಹಾಗೆ ದಾನ ಮಾಡದೆ ನನ್ನಲ್ಲಿರುವುದನ್ನು ಬಚ್ಚಿಟ್ಟರೆ ಅದು ಒಂದಲ್ಲಾ ಒಂದು ದಿನ ಪರರ ಪಾಲಾಗುತ್ತದೆ. ದಾನಿಗೆ ದಾನದ ಫಲ ಮುಂದಿನ ದಿನಗಳಿಗೆ ಕಟ್ಟಿಟ್ಟ ಬುತ್ತಿ!
**"ನಿನ್ನಲ್ಲಿರುವುದನ್ನು ಸಂತೋಷವಾಗಿ ದಾನಮಾಡು"**

**ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು**
**ಸುಡುವಗ್ನಿಯೊಂದೆ ಇರುತಿರಲು, ಕುಲಗೋತ್ರ**
**ನಡೆವೆಯೆತ್ತಣದು ಸರ್ವಜ್ಞ**

ನಾವೆಲ್ಲರೂ ನಡೆದಾವುದು ಒಂದೇ ಭೂಮಿ, ಕುಡಿಯುವ ನೀರು ಸಹ ಪ್ರಕೃತಿದತ್ತವಾದುದು, ಬೆಂಕಿ ಎಲ್ಲರನ್ನೂ ಸುಡುತ್ತದೆ. ಹೀಗಿರುವಾಗ
**ಮಾನವರಲ್ಲಿ ಕುಲಗೋತ್ರಗಳೆಂಬ ಬೇಧ ಭಾವನೆ ಏಕೆ??**

**ವಿದ್ಯೆಯೇ ತಾಯ್ತಂದೆ, ಬುದ್ಧಿಯೇ ಸೋದರನು**
**ಅದ್ವಾನಕಾದರವ ನೆಂಟ, ಸುಖದಿ ತಾ**
**ನಿದ್ದುದೇ ರಾಜ್ಯ, ಸರ್ವಜ್ಞ॥**

ಸದ್ವಿದ್ಯೆಯೇ ಮನುಷ್ಯನಿಗೆ ತಾಯಿ-ತಂದೆ, ಒಳ್ಳೆಯ ಬುದ್ಧಿ ಒಡಹುಟ್ಟಿದವರಂತೆ, ಆಪತ್ತಿನ ಕಾಲಕ್ಕೆ ಆದವನೇ ನೆಂಟ, ಇವುಗಳ ಆಸರೆಯಲ್ಲಿ ಇರುವವನು ಯಾವ ರಾಜ್ಯದಲ್ಲಿದ್ದರೂ (ಎಲ್ಲೇ ಇದ್ದರೂ) ಸುಖವಾಗಿರುವನು.

# 19. ಅರಸನ ಆಯ್ಕೆ



ಒಂದು ಊರಿನಲ್ಲಿ ಒಬ್ಬ ಅರಸನಿದ್ದ. ಅವನು ತುಂಬಾ ಚತುರ, ಪ್ರಾಮಾಣಿಕ ಹಾಗೂ ಧೈರ್ಯಶಾಲಿಯಾಗಿದ್ದನು. ಅವನ ಆಡಳಿತ ಕಾಲದಲ್ಲಿ ಪ್ರಜೆಗಳೆಲ್ಲರೂ ಕ್ಷೇಮದಿಂದ್ದರು. ಹಾಗಾಗಿ ಆಸ್ಥಾನಿಕರು ಮತ್ತು ಪ್ರಜೆಗಳೆಲ್ಲರೂ ಅವನನ್ನು ತುಂಬಾ ಪ್ರೀತಿಸುತ್ತಿದ್ದರು ಹಾಗೂ ಗೌರವಿಸುತ್ತಿದ್ದರು. ಅವನಿಗೆ ಮಕ್ಕಳಿರಲಿಲ್ಲ. ಆಗ ರಾಜನು ಇದುವರೆಗೂ ತನ್ನ ಪ್ರಜೆಗಳು ನನ್ನ ಆಡಳಿತದಿಂದ ಸುಖವಾಗಿದ್ದಾರೆ. ಈಗ ನನಗೆ ವೃದ್ಧಾಪ್ಯ ಸಮೀಪಿಸುತ್ತಿದೆ. ನನ್ನ ನಂತರ ಈ ಸಿಂಹಾಸನವನ್ನು ಏರುವವನು ಪ್ರಾಮಾಣಿಕವಾದ ಆಡಳಿತ ನಡೆಸಿ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಅಂತಹ ತರುಣನನ್ನು ಆಯ್ಕೆ ಮಾಡಬೇಕು ಎಂದು ಯೋಚಿಸಿದನು. ತನ್ನ ಪ್ರಾಂತ್ಯದ ಎಲ್ಲಾ ಯುವಕರಿಗೂ ಒಂದು ಅವಕಾಶ ಕೊಡಬೇಕೆಂದು, ಅವರಿಗೆ ಒಂದು ಸಣ್ಣ ಪರೀಕ್ಷೆ ಮಾಡಬೇಕೆಂದು ತನ್ನ ಮಂತ್ರಿಗೆ ತನ್ನ ಆಲೋಚನೆಯನ್ನು ತಿಳಿಸಿದನು.

ಮಂತ್ರಿ ಅವನ ಯೋಚನೆಯನ್ನು ಪ್ರೋತ್ಸಾಹಿಸಿ ಒಂದು ನಿಗದಿತ ದಿನದಲ್ಲಿ ಪ್ರಾಂತ್ಯದ ಎಲ್ಲಾ ಯುವಕರಿಗೂ ರಾಜನ ಆಸ್ಥಾನಕ್ಕೆ ಬರಲು ಡಂಗೂರ ಸಾರಿಸಿದನು. ಎಲ್ಲಾ ಯುವಕರಿಗೂ ತಮಗೆ ಆಸ್ಥಾನದಿಂದ ಬಂದ ಕರೆಗೆ ಆಶ್ಚರ್ಯ ಹಾಗೂ ಕುತೂಹಲ ಉಂಟಾಯಿತು. ಅಂದು ಎಲ್ಲರೂ ಶಿಸ್ತಿನಿಂದ ರಾಜನ ಮುಂದೆ ಹಾಜರಿದ್ದರು. ರಾಜ ಎಲ್ಲರ ಕೈಯಲ್ಲೂ ಒಂದೊಂದು ಬೀಜವನ್ನಿಟ್ಟು ಈ ಬೀಜವನ್ನು ಚೆನ್ನಾಗಿ ಪೋಷಿಸಿ ಆರು ತಿಂಗಳ ನಂತರ ತಂದು ತೋರಿಸುವಂತೆ ಹೇಳಿದನು. ಯುವಕರೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಕುಂಡಗಳಲ್ಲಿ ಫಲವತ್ತಾದ ಮಣ್ಣು ಮತ್ತು ಗೊಬ್ಬರ ಹಾಕಿ ಪೋಷಿಸತೊಡಗಿದರು. ಅದು ಸುಂದರವಾದ ಹೂವಿನ ಗಿಡವಾಗಿ ಬೆಳೆಯಿತು. ಒಂದೊಂದು ಕುಂಡದಲ್ಲಿಯೂ ಬೆಳೆದ ಹೂಗಳು ಅತ್ಯಾಕರ್ಷಕವಾಗಿದ್ದವು. ಎಲ್ಲರಿಗೂ ತಮ್ಮ ಪರಿಶ್ರಮದ ಮೇಲೆ ಅಪಾರ ನಂಬಿಕೆ ಇತ್ತು.

ಆರು ತಿಂಗಳ ನಂತರ ರಾಜನ ಆಜ್ಞೆಯ ಮೇರೆಗೆ ಎಲ್ಲರೂ ತಾವು ಬೆಳೆದ ಹೂ ಕುಂಡಗಳನ್ನು ಅತಿ ಹೆಮ್ಮೆಯಿಂದ ರಾಜನ ಆಸ್ಥಾನಕ್ಕೆ ತಂದಿರಿಸಿದರು. ಸಾಲಾಗಿ ಜೋಡಿಸಿದ ಆ ಕುಂಡಗಳು ಆಸ್ಥಾನವನ್ನು ಒಂದು ಸುಂದರ ಉದ್ಯಾನವನ್ನಾಗಿ ಮಾಡಿತ್ತು. ಆಸ್ಥಾನದಲ್ಲಿ ಎಲ್ಲರಿಗೂ ಬಹಳ ಸಂತೋಷವಾಯಿತು.

ರಾಜನು ನಗುಮೊಗದಿಂದ ಒಬ್ಬೊಬ್ಬೊರನ್ನೇ ಕರೆದು ಅವರು ಗಿಡ ಬೆಳೆಸಿದ ರೀತಿಯನ್ನು ಸಮಾಧಾನದಿಂದ ಕೇಳಿ, ಪರಿಶ್ರಮವನ್ನು ಹೊಗಳಿ ಬೆನ್ನು ತಟ್ಟಿ ಹುರಿದುಂಬಿಸಿದನು. ಆದರೂ ಅವರಾರಿಗೂ ರಾಜನ ಉದ್ದೇಶ ಅರ್ಥವಾಗಲಿಲ್ಲ.

ಕೊನೆಯಲ್ಲೊಬ್ಬ ಮಣ್ಣುತುಂಬಿದ ಕುಂಡವನ್ನು ತನ್ನ ಮುಂದೆ ಇಟ್ಟುಕೊಂಡು ನಾಚಿಕೆಯಿಂದ ತಲೆತಗ್ಗಿಸಿ ನಿಂತಿದ್ದನು. ಅವನೊಬ್ಬ ಬಡಹುಡುಗ. ಹೆಸರು ನಿತಾಯ್. ರಾಜನು ಅವನನ್ನು ತನ್ನ ಬಳಿಗೆ ಕರೆದಾಗ ಬಡಪಾಯಿ ನಿತಾಯ್ ಹೆದರಿಕೊಂಡು ರಾಜನ ಮುಂದೆ ಬಂದು ತಲೆಬಾಗಿ ನಿಂತನು. ಉಳಿದವರು ಗಿಡವಿಲ್ಲದ ಕುಂಡವನ್ನು ನೋಡಿ ಅಪಹಾಸ್ಯ ಮಾಡಿ ನಕ್ಕರು. ರಾಜನು ಆತನನ್ನು ಕರೆದು ಕುಂಡದ ಈ ಸ್ಥಿತಿಗೆ ಕಾರಣ ಕೇಳಿದಾಗ, ಆ ತರುಣ ಹೇಳಿದ ಕ್ಷಮಿಸಿ ಮಹಾರಾಜ, ನಾನೂ ಎಲ್ಲರಂತೆ ಫಲವತ್ತಾದ ಮಣ್ಣು ಮತ್ತು ಗೊಬ್ಬರವನ್ನು ಹಾಕಿ ಕಾಲ ಕಾಲಕ್ಕೆ ನೀರನ್ನು ಹಾಕಿದ್ದೇನೆ ಎಂದು ವಿನಮ್ರವಾಗಿ ಕೈ ಕಟ್ಟಿ ನಿಂತ. ತಕ್ಷಣ ರಾಜ ಸಿಂಹಾಸನದಿಂದ ಎದ್ದು ಬಂದು ಆನಂದದಿಂದ ನಿತಾಯ್‌ನನ್ನು ಬಾಚಿ ಆಲಂಗಿಸಿಕೊಂಡನು. ಅಲ್ಲಿದ್ದವರಿಗೆ ರಾಜನ ವರ್ತನೆಯಿಂದ ಆಶ್ಚರ್ಯವಾಯಿತು.

ನಂತರ ರಾಜ ಸಭೆಯನ್ನು ಉದ್ದೇಶಿಸಿ ಹೇಳಿದ, ಸಭಿಕರೇ, ನನ್ನ ನಂತರ ರಾಜ್ಯದ ಆಡಳಿತವನ್ನು ನೋಡಿಕೊಳ್ಳಲು ಒಬ್ಬ ಸಮರ್ಥ ಯುವಕ ಬೇಕೆಂದು ಒಂದು ಪರೀಕ್ಷೆ ಮಾಡಿದೆ. ಅದರಲ್ಲಿ ನಿತಾಯ್ ಉತ್ತೀರ್ಣನಾಗಿದ್ದಾನೆ. ನಾನು ಕೊಟ್ಟ ಬೀಜಗಳು ಬೆಂದ ಕಾಳುಗಳು, ಅವು ಎಂದಿಗೂ ಬೆಳೆಯುವುದಿಲ್ಲ. ಎಲ್ಲರೂ ಕಾಳನ್ನು ಬದಲಿಸಿ ಸುಂದರವಾದ ಹೂಗಿಡಗಳನ್ನು ಬೆಳೆಸಿ ನನ್ನ ಮೆಚ್ಚುಗೆ ಗಳಿಸಲು ಯತ್ನಿಸಿದರು. ಆದರೆ ನಿತಾಯ್ ತನ್ನ ಪ್ರಾಮಾಣಿಕತೆ ಹಾಗೂ ಧೈರ್ಯದಿಂದ ನಿಜ ಸಂಗತಿಯನ್ನು ತಿಳಿಸಿದ್ದಾನೆ. ಉತ್ತಮ ರಾಜನಾಗುವ ಎಲ್ಲಾ ಅರ್ಹತೆಗಳು ಇವನಲ್ಲಿದೆ ಆದ್ದರಿಂದ ಇವನೇ ಈ ರಾಜ್ಯದ ಉತ್ತರಾಧಿಕಾರಿ!, ಎಂದು ಘೋಷಿಸಿದ. ಮಂತ್ರಿಗಳು ಹರ್ಷದಿಂದ ರಾಜನಿಗೆ ಜೈಕಾರ ಹಾಕಿದರು. ಯುವಕರ ತಂಡ ನಾಚಿಕೆಯಿಂದ ತಲೆತಗ್ಗಿಸಿತು.

**ಪ್ರಶ್ನೆಗಳು :**

1. ಯುವಕರಿಗೆ ರಾಜನು ಯಾವ ಕೆಲಸ ನೀಡಿದನು?

..............................................................................................................................

2. ಬೆಂದಕಾಳುಗಳಿಂದ ಏಕೆ ಗಿಡ ಬೆಳೆಯುವುದಿಲ್ಲ. ಚರ್ಚಿಸಿ

..............................................................................................................................

3. ಈ ಪದಗಳಿಂದ ಸ್ವಂತ ವಾಕ್ಯ ರಚಿಸು.

1. ಉತ್ತರಾಧಿಕಾರಿ :

..............................................................................................................................

2. ಆಸ್ಥಾನ :

..............................................................................................................................

# 20. ಹನುಮನ ಪರಿಶ್ರಮ



ಹನುಮ ಒಬ್ಬ ಬುದ್ಧಿವಂತ ಹುಡುಗ, ಯಾವ ಕೆಲಸವಾದರೂ ಶ್ರಮಪಟ್ಟು ಮಾಡುವ ವಿದ್ಯಾರ್ಥಿ. ಅವನಿಗೆ ಸದಾ ಏನನ್ನಾದರೂ ಓದುವ ಹವ್ಯಾಸ. ದೊಡ್ಡವನಾದ ಮೇಲೆ ಹೆಚ್ಚು ಹೆಚ್ಚು ಪುಸ್ತಕಗಳನ್ನು ಕೊಂಡು ಓದುವ ಕನಸು ಕಾಣುತ್ತಿದ್ದ.

ಆದರೆ ಹನುಮ ಬಡತನದಲ್ಲಿಯೇ ಬೆಳೆದವನು ತಂದೆಗೆ ದಿನಗೂಲಿ ಕೆಲಸ, ಮನೆಯ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲದವನು. ಆದರೆ ತಾಯಿಗೆ ಹನುಮನ ಮೇಲೆ ಅಪಾರ ಪ್ರೀತಿ. ಶಾಲೆಯಲ್ಲಿ ಚೆನ್ನಾಗಿ ಕಲಿಯಲು ಹುರಿದುಂಬಿಸುತ್ತಿದ್ದಳು. ತಾನು ಅವರಿವರ ಮನೆಗೆಲಸ ಮಾಡಿ ಅಲ್ಪ-ಸ್ವಲ್ಪ ಹಣ ಸಂಪಾದಿಸುತ್ತಿದ್ದಳು.

ಆ ದಿನ ಶಾಲೆಯಲ್ಲಿ ಡಾ॥ ಅಬ್ದುಲ್ ಕಲಾಂ ಬಗ್ಗೆ ಒಂದು ಭಾಷಣವಿತ್ತು. ಅವರ ಜೀವನ ಚರಿತ್ರೆ ಹನುಮನ ಮೇಲೆ ಬಹಳ ಪ್ರಭಾವ ಬೀರಿತು. ಅವನಿಗೆ ಒಂದು ಯೋಚನೆ ಹೊಳೆಯಿತು. ತಾನೂ ಏಕೆ ಅವರಂತೆ ಪೇಪರ್ ಹಂಚುವ ಕೆಲಸ ಮಾಡಬಾರದು? ದಿನವೂ ಬೆಳಿಗ್ಗೆಯೆ ಪೇಪರ್ ಹಂಚಿ ಶಾಲೆಗೆ ಸರಿಯಾದ ವೇಳೆಗೆ ಹೋಗಬಹುದು ಎಂದು ಯೋಚಿಸಿ ಹಾಗೆಯೇ ಮಾಡಲು ತೀರ್ಮಾನಿಸಿದ.

ಅಂತೂ ಹನುಮನ ಆಸೆ ನೆರವೇರಿತು. ಪೇಪರ್ ಹಂಚುವ ಕೆಲಸ ಸಿಕ್ಕಿತು. ಬೆಳಿಗ್ಗೆ ಐದು ಗಂಟೆಗೇ ಎದ್ದು ಪತ್ರಿಕಾ ಕಛೇರಿಗೆ ತಲಪುವುದು, ಬ್ಯಾಗಿನಲ್ಲಿ 50 ಪ್ರತಿ ಪೇಪರನ್ನು ತುಂಬಿಕೊಂಡು, ಅದನ್ನು ಹೆಗಲ ಮೇಲೆ ಹೊತ್ತು, ಮನೆ ಮನೆಗೂ ಹಂಚಿ ಬರುವುದು; ಅವಸರದಿಂದಲೇ ಸ್ನಾನ - ತಿಂಡಿ ಮುಗಿಸಿ ಶಾಲೆಗೆ ಹೋಗುವುದು ಹನುಮನ ದಿನಚರಿಯಾಯಿತು ಪುನಃ! ಶಾಲೆಯಿಂದ ಮನೆಗೆ ಸಂಜೆ ನಡೆದು ಬರುವಷ್ಟರಲ್ಲಿ ಅವನ ಕಾಲುಗಳು ನೋಯುತ್ತಿತ್ತು. ಆದರೆ ಅವನು ಮರುದಿನ ಬೇಗನೆದ್ದು ಪತ್ರಿಕಾ ಕಛೇರಿಗೆ ಸರಿಯಾದ ಸಮಯಕ್ಕೆ ಹೋಗುತ್ತಿದ್ದ. ಅವನು ಕಷ್ಟಪಡಲು ಹಿಂಜರಿಯುತ್ತಿರಲಿಲ್ಲ. ಕಷ್ಟ ಎನಿಸಿದಾಗಲೆಲ್ಲ ಹನುಮ ಡಾ॥ ಅಬ್ದುಲ್ ಕಲಾಂ ಅವರನ್ನು ನೆನೆಯುತ್ತಿದ್ದ, ಅವನಿಗೆ ಕಲಾಂ ಅವರೇ ಹೀರೋ!

ಅಂದು ಶನಿವಾರ ಮಧ್ಯಾಹ್ನ ಶಾಲೆಗೆ ರಜೆ. ಸಹಪಾಠಿ ಗೆಳೆಯ ಸಲೀಂ ಹನುಮನ ಮನೆಗೆ ಬಂದ ಹನುಮನನ್ನು ತನ್ನೊಡನೆ ಬರಬೇಕೆಂದು ಹೇಳಿದ. ಹನುಮನಿಗೆ ಕಾರಣ ತಿಳಿಯಲಿಲ್ಲ. ಸಲೀಂ ತನ್ನ ತಂದೆ ಹನುಮನನ್ನು ಕರೆತರಲು ಹೇಳಿದ್ದಾರೆಂದು ತಿಳಿಸಿದಾಗ ಹನುಮನಿಗೆ ಗಾಬರಿಯಾಯಿತು. ನನ್ನನ್ನೇಕೆ ಅವರು ಕರೆಯುತ್ತಿದ್ದಾರೆ? ಅವರ ಮನೆಗೂ ಪ್ರತಿದಿನ ಸರಿಯಾದ ಸಮಯಕ್ಕೆ ಪೇಪರ್ ಹಂಚುತ್ತೀನಲ್ಲ? ಏಕಿರಬಹುದು? ಎಂದು ಯೋಚಿಸುತ್ತಲೇ ಸಲೀಂ ಜೊತೆಗೆ ನಡೆದ. ಸಲೀಂ ಹನುಮನ ಆತ್ಮೀಯ ಗೆಳೆಯ, ಹನುಮನ ಕಷ್ಟಗಳೆಲ್ಲ ಅವನಿಗೆ ತಿಳಿದಿತ್ತು. ಇಬ್ಬರೂ ಬಜಾರಿಗೆ ಬಂದು ಒಂದು ಸೈಕಲ್ ಅಂಗಡಿಯ ಮುಂದೆ ಬಂದು ನಿಂತರು.

ಸಲೀಂನ ತಂದೆ ಆ ಸೈಕಲ್ ಅಂಗಡಿಯ ಮಾಲೀಕರು. ಹನುಮನನ್ನು ಒಳಗೆ ಕರೆದು ಪ್ರೀತಿಯಿಂದ ಮಾತನಾಡಿದರು. ಆ ಅಂಗಡಿಯಲ್ಲಿ ಅದೆಷ್ಟು ಸೈಕಲ್‌ಗಳು! ಹನುಮ ಅಚ್ಚರಿಯಿಂದ ನೋಡುತ್ತ ನಿಂತ. ಅಷ್ಟರಲ್ಲಿ ಸಲೀಂ ತಂದೆ ಒಂದು ಹೊಸದಾದ ಸೈಕಲ್ ತೋರಿಸಿ- ಹನುಮ, ಈ ಸೈಕಲ್ ನಿನ್ನ ಅಳತೆಗೆ ಸರಿಯಾಗಿದೆ ತೆಗೆದುಕೋ ಎಂದರು ಹನುಮನಿಗೆ ಆಶ್ಚರ್ಯ! ಆದರೂ ಸಾವರಿಸಿಕೊಂಡು ಸರ್, ಈ ಸೈಕಲ್ ಕೊಳ್ಳಲು ಈಗ ನನ್ನ ಬಳಿ ಹಣವಿಲ್ಲ, ಮುಂದೆ ಎಂದಾದರೂ ಬಂದು ಕೊಂಡುಕೊಳ್ಳುತ್ತೇನೆ,

ಈಗ ಬೇಡ ಎಂದ. ಆಗ ಸಲೀಂ ತಂದೆ ಮಗೂ, ಇದನ್ನು ನಿನಗೆ ಉಡುಗೊರೆಯಾಗಿ ಕೊಡುತ್ತಿದ್ದೇನೆ, ನಿನ್ನ ಬಗ್ಗೆ ಸಲೀಂ ನನಗೆ ಎಲ್ಲಾ ಹೇಳಿದ್ದಾನೆ.

ನೀನು ನಡೆದುಕೊಂಡೇ ಪ್ರತಿದಿನ ಸಮಯಕ್ಕೆ ಸರಿಯಾಗಿ ಪತ್ರಿಕೆ ಹಂಚುತ್ತಿರುವೆ. ಈ ನಿನ್ನ ಪರಿಶ್ರಮಕ್ಕಾಗಿ ಇದನ್ನು ಉಡುಗೊರೆಯಾಗಿ ಕೊಡುತ್ತಿದ್ದೇನೆ ತೆಗೆದುಕೊ - ಎಂದು ಹೇಳಿ ಒತ್ತಾಯದಿಂದ ಹನುಮನಿಗೆ ಸೈಕಲ್ ನೀಡಿದರು.

ಮಾರನೆಯ ದಿನದಿಂದ ಹನುಮ ಬಹಳ ಖುಷಿಯಿಂದ ಸೈಕಲ್ ಪೆಡಲ್ ಮಾಡುತ್ತ, ಟ್ರಣ್ ಟ್ರಣ್ ಬೆಲ್ ಸದ್ದು ಮಾಡುತ್ತ ಪೇಪರ್ ಹಂಚಲು ತೊಡಗಿದ. ಕಲಾಂ ಅವರಿಗೆ ಮನಸ್ಸಿನಲ್ಲೇ ವಂದಿಸಿದ!

ಸೋಮವಾರ ಹನುಮ ಶಾಲೆಗೆ ಸೈಕಲ್ ತುಳಿಯತ್ತ ಬಂದು ಸೇರಿದ. ಅವನು ನಿಲ್ಲಿಸಿದ ಹೊಸ ಸೈಕಲ್ ನೋಡಿ ಕೆಲವು ಸಹಪಾಠಿಗಳು ಗುಸು-ಗುಸು ಮಾತನಾಡತೊಡಗಿದರು- ನೋಡ್ರೋ, ಇವನ ಬಳಿ ಹೊಸ ಸೈಕಲ್ ಹೇಗೆ ಬಂತು? ಎಲ್ಲೋ ಕದ್ದು ತಂದಿರಬೇಕು .

ಹೌದು, ಹೌದು, ಕದ್ದ ಸೈಕಲ್ಲೇ ಇರಬೇಕು, ಇವನು ಸೈಕಲ್ ಕಳ್ಳ, ಹನುಮ ಸೈಕಲ್ ಕಳ್ಳ! ಎಂದು ಇತರ ವಿದ್ಯಾರ್ಥಿಗಳು ಹನುಮನನ್ನು ಹೀಯಾಳಿಸಿ, ಗೇಲಿ ಮಾಡಲು ತೊಡಗಿದರು. ಹನುಮನು ಪೇಪರ್ ಹಂಚುವ ಕೆಲಸದ ಬಗ್ಗೆ ಶಾಲೆಯಲ್ಲಿ ಅನೇಕರಿಗೆ ಗೊತ್ತಿರಲಿಲ್ಲ. ಹನುಮ ಈ ಸೈಕಲ್ ಉಡುಗೊರೆಯಾಗಿ ಸಿಕ್ಕಿದ್ದು, ಕದ್ದಿದ್ದಲ್ಲ ಎಂದು ಹೇಳುವಷ್ಟರಲ್ಲಿ ಹುಡುಗರ ಗಲಾಟೆ ಕೇಳಿ ಮುಖ್ಯಶಿಕ್ಷಕರು ಹೊರಗೆ ಬಂದರು. ಸಹಪಾಠಿಗಳೆಲ್ಲ ಒಕ್ಕೊರಲಿನಿಂದ. ಸರ್, ಹನುಮ ಸೈಕಲ್ ಕಳ್ಳ ಎಂದು ಹೇಳಲು ತೊಡಗಿದರು. ಹನುಮ ಧೈರ್ಯದಿಂದ- ಸರ್, ಇದು ಕದ್ದ ಸೈಕಲ್ ಅಲ್ಲ, ನನಗೆ ಸಿಕ್ಕ ಉಡುಗೊರೆ! ಎಂದಾಗ ಸಹಪಾಠಿಗಳೆಲ್ಲ ಗೊಳ್! ಎಂದು ನಕ್ಕರು, ಯಾರೂ ಇವನ ಮಾತು ನಂಬಲಿಲ್ಲ.

ಅಷ್ಟರಲ್ಲಿ ಸಲೀಂ ಅಲ್ಲಿಗೆ ಬಂದ, ಗಲಾಟೆಯನ್ನು ಗಮನಿಸಿದ. ಮುಖ್ಯಶಿಕ್ಷಕರಿಗೆ ಇರುವ ವಿಷಯ ತಿಳಿಸಿದ- ಸರ್, ಹನುಮ ದಿನವೂ ಪೇಪರ್ ಹಂಚಿ ಸ್ವಲ್ಪ ಹಣ ಸಂಪಾದಿಸಬೇಕೆಂದಿದ್ದಾನೆ. ಅವನಿಗೆ ಅಬ್ದುಲ್ ಕಲಾಂ ಅವರೇ ಪ್ರೇರಣೆ. ಇದಕ್ಕಾಗಿ ದಿನವೂ 5-6 ಕಿಮೀ ದೂರ ನಡೆದು ಪೇಪರ್ ಹಂಚುತ್ತಾನೆ, ನನ್ನ ತಂದೆ ಇವನ ಪ್ರಾಮಾಣಿಕ ಪ್ರಯತ್ನ- ಪರಿಶ್ರಮ ನೋಡಿ ಈ ಸೈಕಲ್ಲನ್ನು ಉಡುಗೊರೆ ನೀಡದ್ದಾರೆ. ಎಂದ. ಮುಖ್ಯಶಿಕ್ಷಕರು ಹನುಮನ ಪ್ರಯತ್ನವನ್ನು ಹೊಗಳಿದರು. ಸಹಪಾಠಿಗಳೆಲ್ಲ ನಾಚಿಕೆಯಿಂದ ತಲೆ ತಗ್ಗಿಸಿ ಹನುಮನ ಬಳಿ ಕ್ಷಮೆ ಕೇಳಿದರು. ಹನುಮ ಯೋಚಿಸುತ್ತಲೇ ಇದ್ದ- ಅಬ್ದುಲ್ ಕಲಾಂ ಅವರೂ ಈ ರೀತಿಯ ಅಪವಾದಗಳನ್ನು ಕೇಳಬೇಕಾಯಿತೋ ಏನೋ ಎಂದು ಅವನು ತನ್ನ ಕಣ್ಣಂಚಿನ ನೀರು ಒರೆಸಿಕೊಳ್ಳುತ್ತ ಸಲೀಂನನ್ನು ತಬ್ಬಿಕೊಂಡು ಕೃತಜ್ಞತೆಯಿಂದ ಧನ್ಯವಾದ ಸೂಚಿಸಿದ.

**ಪ್ರಶ್ನೆಗಳು :**

1. ಹನುಮ ಎಂತಹ ವಿದ್ಯಾರ್ಥಿ?

..............................................................................

2. ಅಬ್ದುಲ್ ಕಲಾಂ ಅವರ ಜೀವನ ಚರಿತ್ರೆ ಹನುಮನ ಮೇಲೆ ಹೇಗೆ ಪ್ರಭಾವ ಬೀರಿತು?

..............................................................................

3. ಈ ಪದಗಳಿಂದ ಸ್ವಂತ ವಾಕ್ಯ ರಚಿಸು.

   1. ಕಾಳಜಿ : ..............................................................................
   2. ಹುರಿದುಂಬಿಸು : ..............................................................................
   3. ಪರಿಶ್ರಮ : ..............................................................................

# 21. ವಿಶ್ವಕವಿ ರವೀಂದ್ರನಾಥ ಠಾಗೋರ್



**ರವೀಂದ್ರನಾಥ ಠಾಗೋರ್**
1861-1941

**ಜನನ :** 7-5-1861 (ಬ್ರಿಟಿಷ್ ಆಳ್ವಿಕೆಯ ಕಲ್ಕತ್ತ)
**ತಾಯಿ :** ಶಾರದಾದೇವಿ, ತಂದೆ : ದೇವೇಂದ್ರನಾಥ ಠಾಗೋರ್
**ಪತ್ನಿ :** ಮೃಣಾಲಿನೀ ದೇವಿ, ಮಕ್ಕಳು - ಐದು
**ಸಾಹಿತ್ಯ ರಚನೆ :** ಮೊದಲ ಪದ್ಯ - ವಯಸ್ಸು 8
ನಾಟಕ, ಕವಿತೆಗಳ ಸಂಗ್ರಹಣೆಯ ಪ್ರಕಟಣೆ - ವಯಸ್ಸು 16
**ಸಂಗೀತ ರಚನೆ :** ಬಂಗಾಳೀ ಭಾಷೆಯಲ್ಲಿ (ರವೀಂದ್ರ ಸಂಗೀತ)ದ ಹುಟ್ಟು
ನಮ್ಮ ರಾಷ್ಟ್ರಗೀತೆ - ಜನ-ಗಣ-ಮನ ರಚನೆ
ಬಾಂಗ್ಲಾದೇಶದ ರಾಷ್ಟ್ರಗೀತೆಯ ರಚನೆ
**ಕಾವ್ಯನಾಮ :** ಭಾನುಸಿಂಗ್ ಠಾಕೂರು
**ಚಿತ್ರಕಲೆ :** ಪ್ರಕೃತಿ ವಿಶೇಷಗಳ ವರ್ಣಚಿತ್ರಗಳು.
- ಮಕ್ಕಳ ಕಥೆ, ನಾಟಕಗಳು ಇತರ ಭಾಷೆಗಳಿಗೆ ಭಾಷಾಂತರ.
**1878 :** ಲಂಡನ್ ಯೂನಿವರ್ಸಿಟಿ ಕಾಲೇಜು.
**1880 :** ಕಾಲೇಜು ತೊರೆದು ಸಾಹಿತ್ಯಕ್ಕೆ ಒಲವು.
**1901-1932** 'ಶಾಂತಿನಿಕೇತನ'ದಲ್ಲಿ ಶಾಲೆ, ಗ್ರಂಥಾಲಯ, ವೈವಿಧ್ಯಮಯ ಗಿಡ-ಮರಗಳ ತೋಟ ನಿರ್ಮಾಣ.
**1913 : 'ಗೀತಾಂಜಲಿ'** ಕವನ ಸಂಗ್ರಹ, ಇತರ ಸಾಹಿತ್ಯಕ್ಕೆ ಏಷ್ಯಾ ಖಂಡದಲ್ಲೇ ಮೊಟ್ಟಮೊದಲ ನೊಬೆಲ್ ಪ್ರಶಸ್ತಿ.
**1921 :** ವಿಶ್ವಭಾರತಿ ವಿಶ್ವವಿದ್ಯಾನಿಲಯ ಸ್ಥಾಪನೆ.
**ಮರಣ :** 7 ಆಗಷ್ಟ್ 1941 (ಭಾರತದ ಕಲ್ಕತ್ತ) 80 ವರ್ಷಗಳು.

**ರವೀಂದ್ರರ ಬಾಲ್ಯ :** ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಶ್ವಕವಿ ರವೀಂದ್ರನಾಥ್ ಠಾಗೋರ್ ತಮ್ಮ ಬಾಲ್ಯದ ನೆನಪುಗಳನ್ನು ಸುಂದರವಾಗಿ ದಾಖಲಿಸಿದ್ದಾರೆ. ಇಂತಹ ಮಹಾನುಭಾವರ ಬಾಲ್ಯದ ಸನ್ನಿವೇಶಗಳು ನಮಗೆಲ್ಲಾ ಸ್ಫೂರ್ತಿ!

ರವೀಂದ್ರರನ್ನು ಮನೆಯಲ್ಲಿ ಪ್ರೀತಿಯಿಂದ 'ರವಿ' ಎಂದೇ ಕರೆಯುತ್ತಿದ್ದರಂತೆ. ರವಿಯ ಬಾಲಪ್ರತಿಭೆ, ಸಣ್ಣ ವಯಸ್ಸಿನಲ್ಲೇ ಚುರುಕುತನ, ತುಂಟಾಟ ಹೆಚ್ಚು. ಅವನು ಹುಟ್ಟು ಪ್ರತಿಭಾವಂತ (Genius).

ರವೀಂದ್ರರ ಮನೆ ಅರಮನೆಯಂತಹ ಮನೆ. ಠೀವಿ, ರೀತಿ ನೀತಿಗಳೂ ಹಾಗೆಯೇ. ರವಿ ಹುಟ್ಟುವಾಗಲೇ ಇವರ ಅಣ್ಣಂದಿರು ದೊಡ್ಡವರಾಗಿದ್ದರು. ಇವರು ಹನ್ನೊಂದನೆಯ ಮಗ. ಬಾಲ್ಯದಲ್ಲೇ ತಾಯಿ ತೀರಿಕೊಂಡರು. ಮನೆಯ ಸೇವಕರೇ ಇವರ ಒಡನಾಡಿಗಳು. ಹಾಗಾಗಿ ದೊಡ್ಡ ಮನೆಯಲ್ಲಿದ್ದೂ ತಾನೂ 'ಒಂಟಿ' ಎನಿಸುತ್ತಿತ್ತಂತೆ.

ರವಿಯನ್ನು ಶ್ಯಾಮ ಎಂಬ ಸೇವಕ ನೋಡಿಕೊಳ್ಳುತ್ತಿದ್ದ. ಈತ ರವಿಯನ್ನು ಕಿಟಕಿಯ ಬಳಿಕೂರಿಸಿ, ಸುತ್ತ ಒಂದು ಗೆರೆ ಎಳೆದು 'ಈ ಗೆರೆ ದಾಟಿದರೆ ಅಪಾಯ! ಎಂದು ಹೆದರಿಸಿ ತನ್ನ ಪಾಡಿಗೆ ತಾನು, ಹೋಗಿಬಿಡುತ್ತಿದ್ದ. ಬಾಲರವಿಗೆ ಈ ಗೆರೆ ದಾಟಲು ಭಯ, 'ಏನಾದರೂ ಅಪಾಯವಾದರೆ..?' ಎಂದು ಅಲ್ಲಿಯೇ ಕುಳಿತು ಗಂಟೆಗಟ್ಟಲೆ ಕಿಟಕಿಯ ಹೊರಗೆ ನೋಡುತ್ತಿದ್ದ. ಅಲ್ಲಿ ಕಾಣುವ ಹೊಲ, ಒಂದು ಕೊಳ, ಹೋಗಿ ಬರುವ ಜನ, ದನ-ಕರು, ಆಕಾಶ, ಮೋಡ, ಮಳೆ, ಮರ-ಗಿಡಗಳ ಚಲನವಲನಗಳನ್ನು ನೋಡುತ್ತ ಕಾಲಕಳೆಯುವುದು ಅವನಿಗೆ ಅಭ್ಯಾಸವಾಯಿತು. ತಾನು 'ಒಂಟಿ' ಎನಿಸಿದರೂ ತನ್ನ ಕಲ್ಪನಾಲೋಕದಲ್ಲಿ ಕನಸು ಕಾಣುತ್ತ 'ಪ್ರಕೃತಿಯ ಶಿಶು'ವಾಗಿ ಬೆಳೆಯತೊಡಗಿದ. ಇದೊಂದು ಅವರ ಜೀವನದ ಪ್ರಮುಖ ಘಟ್ಟವಾಯಿತು. ರವೀಂದ್ರರು ತಮ್ಮ ಮೊಟ್ಟಮೊದಲ ಪದ್ಯ ಬರೆದಾಗ ಅವರಿಗಿನ್ನು ಎಂಟು ವಯಸ್ಸು!

ಮುಂದೆ ರವಿಯನ್ನು ಅವನ ಅಣ್ಣಂದಿರು ಓದುತ್ತಿದ್ದ ಶಾಲೆ 'ಓರಿಯಂಟಲ್ ಸೆಮಿನರಿ'ಗೆ ಸೇರಿಸಿದರು. ಅಲ್ಲಿ ಅತೀ ಶಿಸ್ತು ಇಂಗ್ಲೀಷ್ ಶಾಲೆ. ತರಗತಿಗೆ ಹೋಗುವ ಮೊದಲು ಎಲ್ಲರೂ ಗ್ಯಾಲರಿಯಲ್ಲಿ ಒಂದು ಇಂಗ್ಲೀಷ್ ಹಾಡು ಹಾಡಬೇಕು.

'ಕಲ್ಲೋ ಕೀ, ಪುಲ್ಲೋ ಕೀ ಸಿಂಗಲ್ ಮೆಲಾಲಿಂಗ್, ಮೆಲಾಲಿಂಗ್, ಮೆಲಾಲಿಂಗ್'

ಎಂದು ರವಿಯೂ ಅವನ ಗೆಳೆಯರೂ ಹಾಡಿದ್ದೂ ಹಾಡಿದ್ದೇ!

ಎಷ್ಟೋ ವರ್ಷಗಳಾದ ಮೇಲೆ ಈ ಹಾಡನ್ನು ರವೀಂದ್ರರು ಜ್ಞಾಪಿಸಿಕೊಂಡು ಅದು ಇಂಗ್ಲೀಷ್ ಹಾಡಲ್ಲವೇ? ಕಲ್ಲೋಕಿ, ಪುಲ್ಲೋ ಕಿ ಯಾವುದೂ ಇಂಗ್ಲೀಷ್ ಅಲ್ಲವಲ್ಲ? ಎಂದು ಯೋಚಿಸ ತೊಡಗಿದರು. ಕಡೆಗೆ ಆ ಹಾಡಿನ ಇಂಗ್ಲೀಷ್ ಪದಗಳನ್ನು ಪತ್ತೆ ಹಚ್ಚಿದರು. ಅದೇ ಹಾಡು ಸರಿಯಾಗಿ ಉಚ್ಚರಿಸಿದಾಗ

**ಫುಲ್ ಆಫ್ ಗ್ಲೀ, ಫುಲ್ ಆಫ್ ಗ್ಲೀ,**

**ಸಿಂಗಿಂಗ್ ಮೆರ್‍ರಿಲಿ, ಮೆರ್‍ರಿಲಿ, ಮೆರ್‍ರಿಲಿ**

**(ಉಲ್ಲಾಸದಿಂದ ಖುಷಿಯಾಗಿ ನಾವು ಹಾಡುವೆವು ಹಾಡುವೆವು) ಎಂದಾಗಿತ್ತು.**

ಉಪಾಧ್ಯಾಯರೂ ಅರ್ಥ ಹೇಳಲಿಲ್ಲ. ಉಚ್ಚಾರಣೆಯೂ ಸಮೂಹಗಾನದಲ್ಲಿ ಸ್ಪಷ್ಟವಾಗಿ ತಿಳಿಯಲಿಲ್ಲ. ವಿದ್ಯಾರ್ಥಿಗಳು ತಮ್ಮ ಕಿವಿಗೆ ಕೇಳಿದ ಹಾಗೆ ಕಂಠಪಾಠಮಾಡಿ ಜೋರಾಗಿ ಹಾಡುತ್ತಿದ್ದರು!

ಪಾಠಶಾಲೆಗಳಲ್ಲಿ ಹೇಗೆ ಭಾಷೆಯ ಉಚ್ಚಾರಣೆ ಮಕ್ಕಳಿಗೆ ತಿಳಿಯುವ ಹಾಗೆ ಹೇಳಿಕೊಡಬೇಕು ಎಂಬುದಕ್ಕೆ ರವೀಂದ್ರರು ಎಷ್ಟೋ ಬಾರಿ ತಮ್ಮ ಈ ಅನುಭವವನ್ನು ವರ್ಣಿಸುತ್ತಿದ್ದರಂತೆ.

ತನ್ನ ಈ ಶಾಲೆಯ ಶಿಸ್ತು, ಶಿಕ್ಷೆಯಿಂದ ಅವರು ಕಲಿಯುವ ಉತ್ಸಾಹ ಕಳೆದುಕೊಂಡರು. ಒಂದೇ ವರ್ಷಕ್ಕೆ ಶಾಲೆ ತೊರೆದರು. ಆಗಿನಿಂದ ಅವರ ತಂದೆ ಮನೆಯ ಪಾಠಕ್ಕೆ ಪಂಡಿತರನ್ನು ಕರೆಸಿ ರವಿಗೆ ವಿದ್ಯಾಭ್ಯಾಸ ನೀಡಿದರಂತೆ. ಭಾಷೆ, ರಾಮಾಯಣ, ಮಹಾಭಾರತ, ಕಥೆ, ಸಂಗೀತ, ಚಿತ್ರಕಲೆ, ನಾಟಕ. ಬಂಗಾಳೀ ಭಾಷೆಯ ಸಾಹಿತ್ಯ, ಇತ್ಯಾದಿ....ಎಲ್ಲಾ ವಿಷಯಕ್ಕೂ ಬೇರೆ ಬೇರೆ ಪಂಡಿತರು ಮನೆಗೇ ಬಂದು ರವೀಂದ್ರರಿಗೆ ಬೋಧಿಸಿದರಂತೆ. ಅವರೆಲ್ಲರದೂ ಒಂದೇ ಅಭಿಪ್ರಾಯ-'ಅರೇ! ಇಷ್ಟು ಚಿಕ್ಕವಯಸ್ಸಿಗೆ ಎಂತಹ ಕಲಿಯುವ ಉತ್ಸಾಹ! ಅವನ ಜ್ಞಾನ, ಸೃಜನಶೀಲತೆ ಅವನ ವಯಸ್ಸಿಗೆ ಮೀರಿತ್ತು ಎಂದು ಆಶ್ಚರ್ಯ ಪಡುತ್ತಿದ್ದರಂತೆ.

# 22. ನಮ್ಮ ಕರ್ನಾಟಕ

* ಇಲ್ಲಿ ಅಕಾರಾಂತವಾಗಿ ಜಿಲ್ಲೆಗಳನ್ನು ಪಟ್ಟಿ ಮಾಡಿದೆ, ಕ್ರಮವಾಗಿ ಗಟ್ಟಿಯಾಗಿ ಓದು.




1. ಉಡುಪಿ
2. ಉತ್ತರ ಕನ್ನಡ
3. ಕಲಬುರ್ಗಿ
4. ಕೊಪ್ಪಳ
5. ಕೊಡಗು
6. ಕೋಲಾರ
7. ಗದಗ
8. ಚಾಮರಾಜನಗರ
9. ಚಿಕ್ಕಬಳ್ಳಾಪುರ
10. ಚಿಕ್ಕಮಗಳೂರು
11. ಚಿತ್ರದುರ್ಗ
12. ದಕ್ಷಿಣ ಕನ್ನಡ
13. ದಾವಣಗೆರೆ
14. ಧಾರವಾಡ
15. ತುಮಕೂರು
16. ಬಳ್ಳಾರಿ
17. ಬಾಗಲಕೋಟೆ
18. ಬೀದರ
19. ಬೆಳಗಾವಿ
20. ಬೆಂಗಳೂರು(ಗ್ರಾಮೀಣ)
21. ಬೆಂಗಳೂರು(ನಗರ)
22. ಮಂಡ್ಯ
23. ಮೈಸೂರು
24. ಯಾದಗಿರಿ
25. ರಾಮನಗರ
26. ರಾಯಚೂರು
27. ವಿಜಯಪುರ
28. ಶಿವಮೊಗ್ಗ
29. ಹಾವೇರಿ
30 ಹಾಸನ
31. ವಿಜಯಪುರ

* ಒಂದು ಬಿಳಿ ಹಾಳೆಯಲ್ಲಿ ಕರ್ನಾಟಕ ರಾಜ್ಯ ಭೂಪಟವನ್ನು ನಕಲು ಮಾಡು. ಅದರಲ್ಲಿ ನಿನ್ನ ಜಿಲ್ಲೆಗೆ ಚುಕ್ಕಿ ಇಟ್ಟು ನಿನ್ನ ಊರಿನ ಹೆಸರು ಬರೆ.

ಈ ಜಿಲ್ಲೆಗಳ ಹೆಸರನ್ನು ಭೂಪಟದಲ್ಲಿ ಗುರುತಿಸು

**ಭೂಪಟವನ್ನು ಗಮನಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು :**

1. ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡಿರುವ ಗಡಿ ತೀರ ಜಿಲ್ಲೆಗಳ ಹೆಸರು ಬರೆ

**1.** .......................................... **2.** ......................................... **3.** ..........................................

2. ಗಡಿ ರಾಜ್ಯಗಳಿಗೆ ಹೊಂದಿಕೊಂಡಿರುವ ಜಿಲ್ಲೆಗಳನ್ನು ಪಟ್ಟಿಮಾಡು.

| **ಕರ್ನಾಟಕದ ಗಡಿ ರಾಜ್ಯಗಳು** | **ಕರ್ನಾಟಕದ ಗಡಿ ಜಿಲ್ಲೆಗಳು** |
|---|---|
| **1. ಕೇರಳ** | 1. .............................. 2. ................................ 3. ................................... |
| **2. ಗೋವ** | 1. ............................... 2. .................................. |
| **3. ಮಹಾರಾಷ್ಟ್ರ** | 1. ........................................ 2. ........................................... <br> 3. ....................................... 4. ............................................ |
| **4. ತೆಲಂಗಾಣ** | 1. ........................................ 2. ........................................... <br> 3. ....................................... 4. ............................................ |
| **5. ಆಂಧ್ರ ಪ್ರದೇಶ** | 1. ........................................ 2. ........................................... <br> 3. ....................................... 4. ............................................ |
| **6. ತಮಿಳುನಾಡು** | 1. ........................................ 2. ........................................... <br> 3. ....................................... 4. ............................................ |

3. ನಿನ್ನ ಜಿಲ್ಲೆಯ ನೆರೆ ಹೊರೆ ಜಿಲ್ಲೆಗಳು ಯಾವುವು? ಭೂಪಟದಲ್ಲಿ ನೋಡಿ ಬರೆ

| **ನನ್ನ ಜಿಲ್ಲೆ** | **ನೆರೆ ಹೊರೆ ಜಿಲ್ಲೆಗಳು** |
|---|---|
| ................... | 1. .............................. 2. ................................ 3. ................................... <br> 4. ............................. 5. ................................ 6. ..................................... |

# ಕರ್ನಾಟಕದ ಜಿಲ್ಲೆಗಳು

| ಕ್ರ. ಸಂ | ಜಿಲ್ಲೆಗಳು | 1. ನದಿಗಳು | 2. ಜಲಪಾತಗಳು | 3.ಅಣೆಕಟ್ಟುಗಳು | 4. ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು |
|---|---|---|---|---|---|
| 1 | ಉಡುಪಿ | | | | |
| 2 | ಉತ್ತರ ಕನ್ನಡ | ಅಘನಾಶಿನಿ, ಶರಾವತಿ, ಕಾಳಿ, ಗಂಗಾವಳಿ | ದೇವಮಾಲಾ, ಉಂಚಳ್ಳಿ | | |
| 3 | ಕಲಬುರ್ಗಿ | | | | |
| 4 | ಕೊಪ್ಪಳ | | | ತುಂಗಭದ್ರ ಅಣೆಕಟ್ಟು ಮುನಿರಾಬಾದ್ | |
| 5 | ಕೊಡಗು | ಕಾವೇರಿ ಉಗಮ: ತಲಕಾವೇರಿ | ಅಬ್ಬೆ, ಇರ್ಪು | ಹಾರಂಗಿ, ಚಿಕ್ಲಿ ಹೊಳೆ ಅಣೆಕಟ್ಟು | |
| 6 | ಕೋಲಾರ | | | | |
| 7 | ಗದಗ | | | | |
| 8 | ಚಾಮರಾಜನಗರ | | ಹೊಗೇನಕಲ್ | | |
| 9 | ಚಿಕ್ಕಬಳ್ಳಾಪುರ | | | | |
| 10 | ಚಿಕ್ಕಮಗಳೂರು | ತುಂಗಭದ್ರ, ಹೇಮಾವತಿ, ವೇದಾವತಿ | ಕಲ್ಹತ್ತಗಿರಿ (400 ಅಡಿ) ಹೆಬ್ಬೇ (551 ಅಡಿ) | | |
| 11 | ಚಿತ್ರದುರ್ಗ | | | ವಾಣೀವಿಲಾಸ ಅಣೆಕಟ್ಟು | |
| 12 | ದಕ್ಷಿಣ ಕನ್ನಡ | ನೇತ್ರಾವತಿ, ಪಯಸ್ವಿನಿ, ಕುಮಾರಧಾರಾ | | | |
| 13 | ದಾವಣಗೆರೆ | | | | |
| 14 | ಧಾರವಾಡ | | | | |
| 15 | ತುಮಕೂರು | ಶಿಂಷಾ | | ಮಾರ್ಕೋನಹಳ್ಳಿ ಜಲಾಶಯ | |

| ಕ್ರ. ಸಂ | 5. ಪಕ್ಷಿಧಾಮ | 6. ಅರಣ್ಯಧಾಮ | 7. ಚಾರಿತ್ರಿಕ ಸ್ಥಳಗಳು | 8. ಇತರೆ ಪ್ರೇಕ್ಷಣೀಯ ಸ್ಥಳಗಳು |
|---|---|---|---|---|
| 1 | | | ಶ್ರೀಕೃಷ್ಣ ದೇವಸ್ಥಾನ ಕನಕನ ಕಿಂಡಿ | ಮಲ್ಪೆ ಸಮುದ್ರತೀರ, ಜೈನಬಸದಿ ಸೇಂಟ್ ಮೇರೀಸ್ ದ್ವೀಪ, ಜಾಮೀಯ ಮಸೀದಿ |
| 2 | ಅತ್ತಿವೇರಿ ಪಕ್ಷಿಧಾಮ | ದಾಂಡೇಲಿ | ಗೋಕರ್ಣ, ಬನವಾಸಿ | ಯಾಣ, ಇಡುಗುಂಜಿ, ಮುರ್ಡೇಶ್ವರ, ಭೈರವೇಶ್ವರ ದೇವಾಲಯ |
| 3 | | | ಬೌದ್ಧ ಸ್ತೂಪ, ಬಹಮನಿ ಸಾಮ್ರಾಜ್ಯದ ರಾಜಧಾನಿ, ಹಿಂದೂ ಸಂಹಿತೆ ಬರೆದ ವಿಜ್ಞಾನೇಶ್ವರ ಹುಟ್ಟಿದ ಸ್ಥಳ | ಕಲ್ಲೇಶ್ವರ, ವೀರಭದ್ರ, ದೇವಾಲಯ, ಜಾಮಿಯ ಮಸೀದಿ, ಸಿದ್ಧಾರ್ಥ ಬುದ್ಧ ವಿಹಾರ |
| 4 | | | ಕಲ್ಯಾಣ ಚಾಲುಕ್ಯರ ಮಹಾದೇವ ದೇವಾಲಯ, ಇಟಗಿ | ಕಾಶೀನಾಥ, ಹುಲಿಗೆಮ್ಮ, ನಾರಾಯಣ ದೇವಾಲಯ, ಗವಿಮಠ |
| 5 | | ನಾಗರ ಹೊಳೆ ಅರಣ್ಯ ಧಾಮ ಕಾವೇರಿ ನಿಸರ್ಗ ಧಾಮ | ತಲಕಾವೇರಿ, ಭಾಗಮಂಡಲ, ವಿರಾಜಪೇಟೆ ಚರ್ಚ್ | ಬೈಲುಕುಪ್ಪೆ ಗೋಲ್ಡನ್ ಟೆಂಪಲ್, ರಾಜಾಸೀಟ್,ಓಂಕಾರೇಶ್ವರ ದೇವಾಲಯ, ದುಬಾರೆ ಆನೆ ತರಬೇತಿ ಕೇಂದ್ರ |
| 6 | | | | ಕೋಟಿಲಿಂಗೇಶ್ವರ, ಸೋಮೇಶ್ವರ, ಚಿಕ್ಕ ತಿರುಪತಿ ದೇವಾಲಯ, ಬುಲಂದ್ ದರ್ವಾಜಾ |
| 7 | ಮಾಗಡಿ | | ವೀರನಾರಾಯಣ, ನಾಗಾವಿ ರೇಣುಕ ದೇವಿ ದೇವಸ್ಥಾನ | ತ್ರಿಕೋಟೇಶ್ವರ, ಭೀಮಾಂಬಿಕ ದೇವಾಲಯ, ಜುಮ್ಮ ಮಸೀದಿ |
| 8 | | | ಹಿಮವದ್ ಗೋಪಾಲ ಸ್ವಾಮಿ, ಚಿಕ್ಕಲ್ಲೂರಿನ ಸಿದ್ದಪ್ಪಾಜಿ, ಚಾಮರಾಜೇಶ್ವರ ದೇವಸ್ಥಾನ | ಬಂಡೀಪುರ ರಾಷ್ಟ್ರೀಯ ಉದ್ಯಾನವನ, ಮಲೈಮಹದೇಶ್ವರ, ಬಿಳಿಗಿರಿರಂಗನಬೆಟ್ಟ |
| 9 | | | ವಿಶ್ವೇಶ್ವರಯ್ಯ ಹುಟ್ಟಿದ ಸ್ಥಳ, ನಂದಿ ಬೆಟ್ಟ, ಘಾಟಿ ಸುಬ್ರಮಣ್ಯ ದೇವಾಲಯ | ವಿಧುರಾಶ್ವಥ ಎಂಬ ಪವಿತ್ರ ಮರ 1938 ರಲ್ಲಿ ಬ್ರಿಟಿಷರ ವಿರುದ್ಧ ಧ್ವಜ ಸತ್ಯಾಗ್ರಹ ನಡೆದ ಸ್ಥಳ |
| 10 | ಉಳವಿ | ಭದ್ರ ಅಭಯಾರಣ್ಯ | ಶೃಂಗೇರಿ, ಹೊರನಾಡು, ಕಳಸ, ಸೆಂಟ್ ಆಂಡ್ರೂಸ್ ಚರ್ಚ್ | ಕೆಮ್ಮಣ್ಣುಗುಂಡಿ, ಬಾಬಾ ಬುಡನ್ ಗಿರಿ, ಮುಳ್ಳಯ್ಯನ ಗಿರಿ |
| 11 | | ಜೋಗಿ ಮಟ್ಟಿ ಅರಣ್ಯಧಾಮ | ಏಳು ಸುತ್ತಿನ ಅಭೇದ್ಯ ಕೋಟೆ, ಓಬವ್ವನ ಕಿಂಡಿ | ಚಿತ್ರದುರ್ಗ ಕೋಟೆ, ಮಲ್ಲೇಶ್ವರ ದೇವಾಲಯ |
| 12 | | ಪಿಲಿಕುಳ | ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಕಟೀಲು, ಉಳ್ಳಾಲದ ಜಾಮಾ ಮಸೀದಿ, ಸೆಂಟ್ ಅಲೋಷಿಯಸ್ ಚರ್ಚ್ | ವೇಣೂರಿನ ಏಕಶಿಲಾ ಗೊಮ್ಮಟೇಶ್ವರ, ಮೂಡಬಿದರೆಯ ಜೈನರ ದೇವಸ್ಥಾನ, ಮಂಗಳಾದೇವಿ ದೇವಾಲಯ |
| 13 | | | ಕಲ್ಲೇಶ್ವರ ದೇವಾಲಯ, ಭಾಥಿಗುಡ್ಡ, ಕುಂಚನಾಡ ಕೆರೆ | ಕಲ್ಲೇಶ್ವರ ದೇವಾಲಯ, ಭಾಥಿಗುಡ್ಡ, ಕುಂಚನಾಡ ಕೆರೆ |
| 14 | | | ಸವಾಯಿ ಗಂಧರ್ವರ ಹುಟ್ಟೂರು ಕುಂದಗೋಳ | ದತ್ತಾತ್ರೇಯ, ಅಮೃತೇಶ್ವರ ದೇವಾಲಯ |
| 15 | ಕಗ್ಗಲಾಡು ಪಕ್ಷಿಧಾಮ | | ದೇವರಾಯನ ದುರ್ಗ, ಹುಲಿಯೂರು ದುರ್ಗ, ಶಿವಗಂಗೆ, ಸಿದ್ದಗಂಗೆ | ಗೊರವನಹಳ್ಳಿ, ಯಡಿಯೂರು ದೇವಸ್ಥಾನ, ಮಧುಗಿರಿಯ ಏಕಶಿಲಾ ಬೆಟ್ಟ |

ಮುಂದುವರಿದಿದೆ ⟶

| ಕ್ರ. ಸಂ | ಜಿಲ್ಲೆಗಳು | ನದಿಗಳು | ಜಲಪಾತಗಳು | ಅಣೆಕಟ್ಟುಗಳು | ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳು |
|---|---|---|---|---|---|
| 16 | ಬಳ್ಳಾರಿ | ತುಂಗಭದ್ರ | | ತುಂಗಭದ್ರ | ಶಾಖೋತ್ಪನ್ನ ವಿದ್ಯುತ್ ಕೇಂದ್ರ |
| 17 | ಬಾಗಲಕೋಟೆ | ಕೃಷ್ಣ, ಘಟಪ್ರಭ, ಮಲಪ್ರಭ | | | |
| 18 | ಬೀದರ್ | ಮಾಂಜರಾ, ಕಾರಂಜಾ, ಮಲ್ಲಾಮರಿ | | | |
| 19 | ಬೆಳಗಾವಿ | ಘಟಪ್ರಭ, ಮಲಪ್ರಭ | ಗೋಕಾಕ್ ಜಲಪಾತ (171 ಅಡಿ) | | |
| 20 | ಬೆಂಗಳೂರು ಗ್ರಾಮಾಂತರ | | | | |
| 21 | ಬೆಂಗಳೂರು ನಗರ | | ಮುತ್ಯಾಲಮಡು | | |
| 22 | ಮಂಡ್ಯ | | ಗಗನಚುಕ್ಕಿ, ಭರಚುಕ್ಕಿ | ಕೃಷ್ಣರಾಜ ಸಾಗರ | ಶಿವನ ಸಮುದ್ರ ಏಷ್ಯಾದ ಮೊದಲ ಜಲ ವಿದ್ಯುತ್ ಕೇಂದ್ರ |
| 23 | ಮೈಸೂರು | ಕಬಿನಿ ಕೇರಳದ ವೈನಾಡ್ | ಚುಂಚನಕಟ್ಟೆ | | ಮಾಧವ ಮಂತ್ರಿ ಜಲ ವಿದ್ಯುತ್ ಕೇಂದ್ರ, ಹೆಮ್ಮಿಗೆ |
| 24 | ಯಾದಗಿರಿ | | | | |
| 25 | ರಾಮನಗರ | | | | |
| 26 | ರಾಯಚೂರು | | | | ಶಾಖೋತ್ಪನ್ನ ವಿದ್ಯುತ್ ಕೇಂದ್ರ |
| 27 | ವಿಜಯಪುರ | ಭೀಮಾ ಭೀಮಾಶಂಕರ | | ಆಲಮಟ್ಟಿ, ನಾರಾಯಣಪುರ | ಆಲಮಟ್ಟಿ ಜಲ ವಿದ್ಯುತ್ ಕೇಂದ್ರ |
| 28 | ಶಿವಮೊಗ್ಗ | ಶರಾವತಿ, ತೀರ್ಥಹಳ್ಳಿಯ ಅಂಬುತೀರ್ಥ | ಜೋಗ ಜಲಪಾತ (829 ಅಡಿ) | ಗಾಜನೂರು, ತುಂಗ ಅಣೆಕಟ್ಟು | ಶರಾವತಿ ಜಲ ವಿದ್ಯುತ್, ಮಹಾತ್ಮ ಗಾಂಧಿ ವಾರಾಹಿ ಜಲ ವಿದ್ಯುತ್ ಕೇಂದ್ರ |
| 29 | ಹಾಸನ | ಹೇಮಾವತಿ, ಯಗಚಿ | | ಹೇಮಾವತಿ ಜಲಾಶಯ | ಶಾಖೋತ್ಪನ್ನ ವಿದ್ಯುತ್ ಕೇಂದ್ರ |
| 30 | ಹಾವೇರಿ | | | | |

| ಕ್ರ ಸಂ | ಪಕ್ಷಿಧಾಮ | ಅರಣ್ಯಧಾಮ | ಚಾರಿತ್ರಿಕ ಸ್ಥಳಗಳು | ಇತರೆ ಪ್ರೇಕ್ಷಣೀಯ ಸ್ಥಳಗಳು |
|---|---|---|---|---|
| 16 | | | | ಹಂಪೆ ಕೋಟೆ, ಅರಮನೆ, ದೇವಸ್ಥಾನ, ಸ್ಮಾರಕ, UNESCO–ವಿಶ್ವ ಪಾರಂಪರಿಕ ಸ್ಥಳ |
| 17 | | | ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲ ಸಂಗಮ | ಬಾದಾಮಿ ಬನಶಂಕರಿ, ಶಿವಯೋಗ ಮಂದಿರ, ಅಬೂಬಕರ್ ದರ್ಗಾ |
| 18 | | | ಮೋತಿ ಮಹಲ್, ಬಸವ ಕಲ್ಯಾಣ, ಬೀದರ್ ಕೋಟೆ, ಗುರುದ್ವಾರ | ನರಸಿಂಹ ದೇವಾಲಯ, ಪೀರನ್ ದರ್ಗಾ, ರಂಗೀನ್ ಮಹಲ್ |
| 19 | | | ಕಿತ್ತೂರು ಕೋಟೆ, ಬೆಳವಡಿ ಕೋಟೆ | ಕಪಿಲೇಶ್ವರ, ಶಿರಸಂಗಿ, ಸವದತ್ತಿ ಎಲ್ಲಮ್ಮನ ಗುಡ್ಡ, ನವಿಲು ತೀರ್ಥ, ಗೊಡಚಿ ವೀರಭದ್ರ |
| 20 | | | ದೇವನಹಳ್ಳಿ ಕೋಟೆ | |
| 21 | | ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನ | ಕೆಂಪೇಗೌಡ ಸ್ಮಾರಕ | |
| 22 | ರಂಗನ ತಿಟ್ಟು, ಕೊಕ್ಕರೆ ಬೆಳ್ಳೂರು | ಮೇಲುಕೋಟೆ ವನ್ಯ ಮೃಗಧಾಮ | ಟಿಪ್ಪು ಸುಲ್ತಾನ್ ಕೋಟೆ, ಬೇಸಿಗೆ ಅರಮನೆ, ಕಾವೇರಿ ಸಂಗಮ, ಶಿವನ ಸಮುದ್ರ | ಶ್ರೀರಂಗನಾಥ ಸ್ವಾಮಿ, ನಿಮಿಷಾಂಬ, ಮೇಲುಕೋಟೆ ಚೆಲುವನಾರಾಯಣ ಸ್ವಾಮಿ, ಆದಿಚುಂಚನಗಿರಿ ದೇವಾಲಯ |
| 23 | | | ಸೋಮನಾಥಪುರ, ತಿರುಮಕೂಡಲು ನರಸೀಪುರ, ತಲಕಾಡು ಪಂಚಲಿಂಗ ದರ್ಶನ, ಚಾಮುಂಡಿಬೆಟ್ಟ, ನಂದಿ | ಮೈಸೂರು ದಸರಾ, ನಂಜನಗೂಡು, ವಿಶ್ವವಿದ್ಯಾಲಯ, ಸೆಂಟ್ ಫಿಲೋಮಿನಾಸ್ ಚರ್ಚ್ |
| 24 | ಬೋನಲ್ ಪಕ್ಷಿಧಾಮ | | ಯಾದಗಿರಿ ಕೋಟೆ, ಹ್ಯೂಎನ್‌ತ್ಸಾಂಗ್ ಮೆಮೋರಿಯಲ್ ಹಾಲ್ | ಲುಂಬಿನಿ ಪಾರ್ಕ್, ಮೆಕ್ಕಾಮಸೀದಿ, ಮೈಲಾರ ಲಿಂಗೇಶ್ವರ ದೇವಾಲಯ, ವಿಶ್ವ ಶಾಂತಿ ಸ್ತೂಪ |
| 25 | ರಾಮದೇವರ ಬೆಟ್ಟ ರಣಹದ್ದು ಪಕ್ಷಿಧಾಮ | | ರಾಮದೇವರ, ಹನುಮದೇವರ ಬೆಟ್ಟ | |
| 26 | | | ಮಸ್ಕಿ – ಅಶೋಕ ಚಕ್ರವರ್ತಿಯ ಶಿಲಾಶಾಸನ ದೊರೆತ ಸ್ಥಳ | ವಿಷ್ಣು, ಮಾರ್ಕಂಡೇಶ್ವರ ದೇವಾಲಯ, ಏಕ್ ಮಿನಾರ್ ಕಿ ಮಸೀದಿ |
| 27 | | | ಬಸವನ ಬಾಗೇವಾಡಿ, ನಗರೇಶ್ವರ, ಅಂಬಾಭವಾನಿ | ಚಾಮದ್ ಬಾಡಿ, ಗೋಳ ಗುಮ್ಮಟ, ಬಾರಾಕಮಾನ್, ಗಗನಮಹಲ್ |
| 28 | ಗಡವಿ, ಮಂಡಗದ್ದೆ ಪಕ್ಷಿಧಾಮ | ಭದ್ರ, ಶರಾವತಿ, ಶೆಟ್ಟಿಹಳ್ಳಿ ವನ್ಯಮೃಗ ಧಾಮ | ಸಿಂಗಂಧೂರು ಚೌಡೇಶ್ವರಿ ದೇವಸ್ಥಾನ, ಸದ್ಗುರು ಶ್ರೀಧರಾಶ್ರಮ, ಕೊಡಚಾದ್ರಿ ಬೆಟ್ಟ, ಆಗುಂಬೆ | ತ್ರಿಪುರಾಂತೇಶ್ವರ, ಕೇದಾರೇಶ್ವ ದೇವಾಲಯ. ರಾಷ್ಟ್ರ ಕವಿ ಕುವೆಂಪು ಜನ್ಮಸ್ಥಳ ಕುಪ್ಪಳ್ಳಿ |
| 29 | | | ಪುಷ್ಪಗಿರಿ, ಹಾಸನಾಂಬ ದೇವಾಲಯ | ಬೇಲೂರು, ಚೆನ್ನಕೇಶವರಾಯ ಹಳೇಬೀಡು, ಹೊಯ್ಸಳ ವಾಸ್ತು ಶಿಲ್ಪ ಶ್ರವಣಬೆಳಗೊಳ, ಜೈನ ಬಸದಿ |
| 30 | ಬಂಕಾಪುರ ನವಿಲು ಪಕ್ಷಿಧಾಮ | ರಾಣೆಬೆನ್ನೂರು ವನ್ಯ ಮೃಗಧಾಮ | | ಕಾಗಿನೆಲೆ, ಸರ್ವಜ್ಞ, ಮೈಲಾರದ ಮೈಲಾರ ಲಿಂಗೇಶ್ವರ ದೇವಾಲಯ, ಬಂಕಾಪುರ ನಗರೇಶ್ವರ ದೇವಾಲಯ |

# ಕರ್ನಾಟಕದ ವಿಶೇಷತೆಗಳು

1. ಕರ್ನಾಟಕದ ನಾಮಕರಣ ದಿನಾಂಕ ..........................................................................**01/11/1956**

2. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಿವೆ?..........................................................................**31**

3. ಕರ್ನಾಟಕ ರಾಜ್ಯದ ವಿಸ್ತೀರ್ಣ ..........................................................................**191.976 ಚ.ಕಿ.ಮೀ**

4. ಕರ್ನಾಟಕ ರಾಜ್ಯದ ಜನಸಂಖ್ಯೆ ..........................**6,11,30,704 (2011 ರ ಜನಗಣತಿ ಪ್ರಕಾರ)**

5. ಕರ್ನಾಟಕದ ರಾಜಧಾನಿ ..........................................................................**ಬೆಂಗಳೂರು**

6. ಕರ್ನಾಟಕದ ಸಾಂಸ್ಕೃತಿಕ ನಗರ ..........................................................................**ಮೈಸೂರು**

7. ಕಾರ್ನಾಟಕದ ರಾಜ್ಯ ಪಕ್ಷಿ ..........................................................................**ನೀಲಕಂಠ**

8. ಕರ್ನಾಟಕ ರಾಜ್ಯದ ಮರ ..........................................................................**ಶ್ರೀಗಂಧ**

9. ಕರ್ನಾಟಕ ರಾಜ್ಯದ ಹೂವು ..........................................................................**ಕಮಲ**

10. ಕರ್ನಾಟಕ ರಾಜ್ಯ ಪ್ರಾಣಿ ..........................................................................**ಆನೆ**

11. ಕರ್ನಾಟಕ ರಾಜ್ಯದ ಅತಿ ದೊಡ್ಡ ಜಿಲ್ಲೆ ..........................................................................**ಬೆಳಗಾವಿ**

12. ಕರ್ನಾಟಕದ ಅತಿ ಚಿಕ್ಕ ಜಿಲ್ಲೆ ..........................................................................**ಕೊಪ್ಪಳ**

13. ಕರ್ನಾಟಕದ ನಾಡ ಗೀತೆ ಬರೆದ ಕವಿ ..........................................................................**ಕುವೆಂಪು**

14. ಕನ್ನಡದ ಮೊಟ್ಟ ಮೊದಲ ಕವಿ..........................................................................**ಪಂಪ**

15. ಕನ್ನಡದ ಮೊಟ್ಟ ಮೊದಲ ಕವಿಯತ್ರಿ .......................................................... **ಅಕ್ಕಮಹಾದೇವಿ**

16. ಕರ್ನಾಟಕದಲ್ಲಿ ದೊರೆತ ಮೊದಲ ಶಾಸನ ..........................................................**ಹಲ್ಮಿಡಿ ಶಾಸನ**

17. ಕನ್ನಡದ ಮೊದಲ ನಿಘಂಟು ರಚಿಸಿದವರು ..................**ಫರ್ಡಿನ್ಯಾಂಡ್ ಕಿಟ್ಟಲ್ (ಜರ್ಮನಿ)**

18. ಕರ್ನಾಟಕದಲ್ಲಿರುವ **UNESCO** ಪ್ರಮಾಣಿತ ಪಾರಂಪರಿಕ ಸ್ಥಳ ..............................**ಹಂಪೆ**

19. ಸರಸ್ವತೀ ಸನ್ಮಾನ ಪುರಸ್ಕೃತರು ..........................................................**ಎಸ್. ಎಲ್. ಭೈರಪ್ಪ**

20. ಕರ್ನಾಟಕ ರಾಜ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ

| ಕ್ರ.ಸಂ | ವರ್ಷ | ಲೇಖಕರು | ಕೃತಿಗಳು |
|---|---|---|---|
| 1 | 1967 | ಕುವೆಂಪು (ಕೆ. ವಿ. ಪುಟ್ಟಪ್ಪ) | ಶ್ರೀ ರಾಮಾಯಣದರ್ಶನಂ |
| 2 | 1973 | ಅಂಬಿಕಾತನಯದತ್ತ (ದ. ರಾ ಬೇಂದ್ರೆ) | ನಾಕು ತಂತಿ |
| 3 | 1977 | ಕೋಟ ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು |
| 4 | 1983 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕ್ಕ ವೀರ ರಾಜೇಂದ್ರ |
| 5 | 1990 | ವಿನಾಯಕ ಕೃಷ್ಣ ಗೋಕಾಕ್ | ಭಾರತ ಸಿಂಧು ರಶ್ಮಿ |
| 6 | 1994 | ಯು. ಆರ್. ಅನಂತಮೂರ್ತಿ | ಸಮಗ್ರ ಸಾಹಿತ್ಯ |
| 7 | 1998 | ಗಿರೀಶ್ ಕಾರ್ನಾಡ | ಸಮಗ್ರ ಸಾಹಿತ್ಯ |
| 8 | 2010 | ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ |

# ಸ್ವಯಂ ವಾಚನ

**ಈ ಕೆಳಗಿನ ಚಟುವಟಿಕೆಗಳನ್ನು ನೀಡಿ.**

1. ಪ್ರತಿ ಮಗುವಿನ ಹೆಸರು, ತರಗತಿ, ಶಾಲೆ, ಮನೆಯ ವಿಳಾಸ ಒಂದು ಸಣ್ಣ ರಟ್ಟಿನಲ್ಲಿ ಬರೆದು ಗುರುತಿನ ಚೀಟಿ ತಯಾರಿಸಿ, ಓದಲು ಕೊಡಿ. ಪ್ರತಿ ಮಗವೂ ಅಂಗಿಗೆ ತನ್ನ ಗುರುತಿನ ಚೀಟಿ ಸಿಕ್ಕಿಸಿಕೊಳ್ಳಲಿ. ಸರತಿಯಂತೆ ಒಂದು ಮಗು ಮತ್ತೊಂದು ಮಗುವಿನ ಚೀಟಿ ಓದಲಿ. ಉಳಿದ ಮಕ್ಕಳು ಗಮನವಿಟ್ಟು ಕೇಳಲಿ, ತಪ್ಪಿದ್ದರೆ ತಿದ್ದಿ.

   (ಗುರುತಿನ ಚೀಟಿ ಮೆಟ್ಟಿಲು 5ರ ಸಂಕೇತವಾಗಲಿ)

2. ಬಿಳಿ ಹಾಳೆಗಳಲ್ಲಿ ಈ ಕೆಳಗಿನ ವಿಷಯಗಳ 'ಪದಪಟ್ಟಿ' ದೊಡ್ಡದಾಗಿ ಬರೆದು ಓದಲು ಕೊಡಿ. ದೇಹದ ಭಾಗಗಳು, ಹಣ್ಣು-ಹೂವು-ತರಕಾರಿ, ಪ್ರಾಣಿಗಳ ಹೆಸರು, ಬಡಾವಣೆ-ಊರುಗಳ ಹೆಸರು, ವಾರ, ತಿಂಗಳು, ದಿಕ್ಕುಗಳು, ಹಬ್ಬಗಳು, ತಿಂಡಿಗಳು, ಅಡಿಗೆಗೆ ಬಳಸುವ ಸಾಮಗ್ರಿಗಳು ಇತ್ಯಾದಿ.
3. ಶಾಲೆಯ ಆವರಣದಲ್ಲಿರುವ, ರಸ್ತೆಯಲ್ಲಿ ಕಾಣುವ ಅಂಗಡಿ ಫಲಕಗಳನ್ನು ಓದಿಸಿ.
4. ಆಹ್ವಾನ ಪತ್ರಿಕೆ, ಭಿತ್ತಿ ಪತ್ರಗಳನ್ನು ಓದಿಸಿ.
5. ದಿನ ಪತ್ರಿಕೆ, ವಾರ ಪತ್ರಿಕೆ, ಮಕ್ಕಳ ಮಾಸ ಪತ್ರಿಕೆಗಳನ್ನು ಓದಿಸಿ.
6. ಪಠ್ಯ ಪುಸ್ತಕದಿಂದ ಸರಳ ಪದ್ಯ, ಕಥೆ, ನಾಟಕಗಳನ್ನು ಓದಿಸಿ.

   ಮೊದಲು ಪದಗಳನ್ನು ಮೌನವಾಗಿ ಓದಿಕೊಂಡು, ನಂತರ ವಾಕ್ಯಗಳನ್ನು ಗಟ್ಟಿಯಾಗಿ ಓದಲು ನೆರವಾಗಿ.

**ವಿಶೇಷ ಸೂಚನೆ**

ಯಾವುದಾದರೂ ಮಗುವಿಗೆ ತಿದ್ದಲಾಗುವ ಉಚ್ಚಾರಣಾ ದೋಷಗಳು ಕಂಡುಬಂದರೆ ಅಥವಾ ಸರಳ ಕನ್ನಡದ ಮೆಟ್ಟಿಲುಗಳನ್ನು ಸರಾಗವಾಗಿ ಏರದಿದ್ದರೆ, ವೈದ್ಯರ ಸಲಹೆ ಪಡೆಯಲು ನೆರವಾಗಿ : ಮಗುವಿನ ತೊದಲು/ಉಗ್ಗು/ಸೀಳಿದ ತುಟಿಗಳಿಂದ ಆಗುವ ಉಚ್ಚಾರಣಾ ದೋಷ ನಿವಾರಣೆಗೆ ಪರಿಣಿತರ ನೆರವು ಅಗತ್ಯ. ಇದಕ್ಕಾಗಿ ಮಗುವನ್ನು ಹಿಯಾಳಿಸುವುದು, ದಂಡಿಸುವುದು ಮಗುವಿನ ಬೆಳವಣಿಗೆಗೆ ಮಾರಕ.